Licence No. 60.
Licenced to Post without Prepayment.

Reg. No. M. 1550.
'KODAGU' MERCARA, (Coorg).

ಕೊಡಗು

ಸಂಪಾದಕರು—ಪಿ. ಐ. ಬೆಳ್ಯಪ್ಪನವರು] [ವಾರ್ಷಿಕ ಚಂದಾ ರೂ. 5-0-0.

ಸಂಪುಟ ೩೧ | ತಾರೀಕು ೧೯-೯-೧೯೫೨ನೇ ಶುಕ್ರವಾರ | ಸಂಚಿಕೆ ೧೬

ಭಾರತ ಸಂವಿಧಾನದ ರೂಪರೇಖೆಗಳು

(ಔಟ್ ಲೈನ್ಸ್ ಆಫ್ ಇಂಡಿಯನ್ ಕಾನ್ಸ್ಟಿಟ್ಯೂಷನ್)

ಲೇ:—ಶ್ರೀ ವಿ. ಎಸ್. ರಾಮಕೃಷ್ಣ, ಬಿ. ಎಸ್ಸಿ (ಆನರ್ಸ್) ಬಿ. ಟಿ.,

ಭಾರತದ ಸಂವಿಧಾನವು ೯೯೫ ಆರ್ಟಿಕಲ್ಸ್ ಗಳಿಂದಲೂ, ೨೨ ಭಾಗಗಳಿಂದಲೂ ೮ ಅನುಸೂಚಿ (ಶೆಡ್ಯೂಲ್ಸ್)ಗಳಿಂದಲೂ ಕೂಡಿರುವುದು. ಇ ಷ್ಟೊಂದು ದೊಡ್ಡದಾದ ರಾಜ್ಯಾಂಗ ಶಾಸನವು ಪ್ರಪಂಚದ ಯಾವ ರಾಷ್ಟ್ರಗಳಲ್ಲೂ ಇಲ್ಲ. ಈ ಶಾಸನದಲ್ಲಿ ಅಡಕವಾದ ಕೆಲವು ಭಾಗಗಳು ಇತರ ರಾಷ್ಟ್ರಗಳ ಶಾಸನಗಳಲ್ಲೂ ಕಂಡು ಬರಬಹುದು. ಎಂದ ಮಾತ್ರಕ್ಕೆ ಈ ಶಾಸನವೊಂದು ಕೇವಲ ಅನ್ಯರಾಷ್ಟ್ರ ಶಾಸನಗಳ ಅನುಕರಣೆಯೆಂದು ಮಾತ್ರ ತಿಳಿಯಕೂಡದು. ಇ ಷ್ಟೊಂದು ವಿಸ್ತಾರವೂ ವ್ಯಾಪಕವೂ ಆದ ಸಂವಿಧಾನವೇಕೆಂದು ಹಲವರು ಪ್ರಸ್ತಾಪಿಸಬಹುದು. ಆದರೆ ಭಾರತದ ವೈವಿಧ್ಯಪೂರ್ಣ ಆಚಾರ ವಿಚಾರ ವ್ಯವಹಾರಗಳ ದೃಷ್ಟಿಯಿಂದಲೂ ಭಾರತದ ವಿಶಾಲತೆಯ ದೃಷ್ಟಿಯಿಂದಲೂ ಇಷ್ಟೊಂದು ಬೃಹತ್ಗ್ರಂಥವು ಅಗತ್ಯವಾಯಿತು. ಅನೇಕ ತಾರ್ಕಿಕ ವಿಷಯಗಳನ್ನು ಸ್ಪಷ್ಟವಾಗಿ ವಿವರಿಸಲೂ ಅನೇಕ ಪ್ರಜಾ ಸಂಸ್ಥೆಗಳ ರೂಪರೇಖೆಗಳನ್ನು ನಿರ್ದಿಷ್ಟವಾಗಿ ವರ್ಣಿಸಲೂ ಇಷ್ಟೊಂದು ದೊಡ್ಡ ರಾಜ್ಯಾಂಗ ಶಾಸನವು ಅಗತ್ಯವಾಗಿ ಕಂಡು ಬಂದಿತು.

ಸಂವಿಧಾನದಲ್ಲಿ ಪ್ರತಿಪಾದಿತವಾದ ವ್ಯಕ್ತಿಯ ಮೂಲಭೂತ ಹಕ್ಕುಗಳು (ಫಂಡಮೆಂಟಲ್ ರೈಟ್ಸ್) ಸಂವಿಧಾನಕ್ಕೆ ಭೂಷಣಪ್ರಾಯವಾಗಿರುವುದು. ವ್ಯಕ್ತಿಯ ಮೂಲಭೂತ ಹಕ್ಕುಗಳನ್ನು ಪಾಶ್ಚಾತ್ಯ ದೇಶಗಳ ಅನೇಕ ಸಂವಿಧಾನಗಳೂ ನಿರೂಪಿಸಿರುವವು. ಒಂದನೇ ಜಾಗತೀಕ ಯುದ್ಧದ ತರುವಾಯ ಅವಶ್ಯವೆಂದು ಕಂಡು ಬಂದ ಈ ಹಕ್ಕು ನಿರೂಪಣೆಯು ದ್ವಿತೀಯ ಜಾಗತಿಕ ಯುದ್ಧಾನಂತರ ಅನಿವಾರ್ಯವೆಂದು ಪರಿಗಣಿಸಲ್ಪಟ್ಟಿತು. ಮೂಲಭೂತ ಹಕ್ಕುಗಳ ನಿರೂಪಣವು ಸಾರ್ವಜನಿಕ ಅಭಿಪ್ರಾಯ ಸ್ಪಷ್ಟೀಕರಣದ ದೃಷ್ಟಿಯಿಂದ ಅಗತ್ಯವಾಗಿದ್ದು ಸರಕಾರದ ರೀತಿ ನೀತಿಗಳನ್ನು ನಿಯಂತ್ರಿಸುತ್ತಿರುವುದು. ಮೂಲಭೂತ ಹಕ್ಕುಗಳು ಸಂವಿಧಾನದಲ್ಲೇ ಪ್ರತಿಪಾದಿತವಾಗಿರುವುದರಿಂದ ಪರಮ ನ್ಯಾಯಾಲಯ (ಸುಪ್ರೀಂ ಕೋರ್ಟು)ವು ರಾಷ್ಟ್ರದ ಸಹಾಯಕ್ಕೆ ಬರುವ ಅವಶ್ಯಕತೆ ಇಲ್ಲ. ಅಮೇರಿಕದ ರಾಜ್ಯಾಂಗ ಶಾಸನದಲ್ಲಿ ಉಲ್ಲೇಖಿತವಾದ ಮೂಲಭೂತ ಹಕ್ಕುಗಳ ಸ್ಪಷ್ಟೀಕರಣವು ಭಾರತ ಸಂವಿಧಾನಕ್ಕೆ ಬಹುಶೇಕ ಹೋಲುವುದು.

ಸಮಾನತೆಯ ಹಕ್ಕು, ಸ್ವಾತಂತ್ರ್ಯದ ಹಕ್ಕು, ದಬ್ಬಾಳಿಕೆಯ ವಿರೋಧ ಪ್ರದರ್ಶನ ಹಕ್ಕು, ಸ್ವಧರ್ಮಾವಲಂಬನದ ಹಕ್ಕು, ಸಾಂಸ್ಕೃತಿಕ ಶೈಕ್ಷಣಿಕ ಹಕ್ಕು, ಆಸ್ತಿ ಹೊಂದಿಕೊಳ್ಳುವ ಹಕ್ಕು, ಸಂವಿಧಾನ ಪರೀತ್ಯ ಪರಿಹಾರಗಳನ್ನು ಪಡೆದುಕೊಳ್ಳುವ ಹಕ್ಕುಗಳು ಮೂಲಭೂತ ಹಕ್ಕುಗಳೆಂದು ಪರಿಗಣಿಸಲ್ಪಡುವುವು. ರಾಜ್ಯಾಂಗ ಶಾಸನದ ೧೭ನೆಯ ಅನುಚ್ಛೇದವು ಅಸ್ಪೃಶ್ಯತಾ ನಿವಾರಣೆಯನ್ನು ವರ್ಣಿಸುತ್ತಾ ಅಸ್ಪೃಶ್ಯತೆಯನ್ನು ಯಾವ ರೂಪದಲ್ಲಾಗಲೀ ಆಚರಣೆಗೆ ತರುವುದು ಶಿಕ್ಷಾರ್ಹವೆಂದು ಘೋಷಿಸುವುದರಿಂದ ಸರ್ವ ಸಮತೆಯನ್ನು ಪ್ರತಿಪಾದಿಸುವುದು. ಸಂವಿಧಾನದ ೧೮ನೆಯ ಅನುಚ್ಛೇದವು ಪ್ರತಿಯೊಬ್ಬ ಪೌರನಿಗಿರುವ ಅಭಿಪ್ರಾಯ ಸ್ಪಷ್ಟೀಕರಣ ಸ್ವಾತಂತ್ರ್ಯವನ್ನೂ, ಶಾಂತಿಯಿಂದ ಸಭೆಗೂಡಿ ಸಂಘಗಳನ್ನು ನಿರ್ಮಿಸಿಕೊಳ್ಳುವ ಹಕ್ಕನ್ನೂ ಭಾರತದ ಯಾವ ಭಾಗಗಳಲ್ಲಾಗಲೀ ವಾಸಿಸುವ ಸ್ವಾತಂತ್ರ್ಯವನ್ನೂ ಆಸ್ತಿಯನ್ನು ಹೊಂದಲೂ ಅನುಭವಿಸಲೂ ಮೂರಾಟ ಮಾಡಲೂ ಇರುವ ಸ್ವಾತಂತ್ರ್ಯವನ್ನೂ ತನಗಿಚ್ಛೆ ಬಂದ ವೃತ್ತಿಯನ್ನು ಆವಲಂಬಿಸುವ ಹಕ್ಕನ್ನೂ ಪೌರನಿಗೆ ಕೊಟ್ಟಿರುವುದು. ಈ ಹಕ್ಕುಗಳನ್ನು ಇತರ ಪೌರರ ಮೂಲಭೂತ ಹಕ್ಕುಗಳಿಗೆ ಅಡ್ಡಿ ಬರದಂತೆ ಅನುಭವಿಸಲೂ ಭಾರತದ ಸಂವಿಧಾನವು ಪ್ರತಿಬಂಧಿಸುವುದು.

ಸಂವಿಧಾನವು ೨೧ನೆಯ ಅನುಚ್ಛೇದವು ವ್ಯಕ್ತಿಗತ ಸ್ವಾತಂತ್ರ್ಯವನ್ನು ವಿವರಿಸುವುದು. ನ್ಯಾಯಾಲಯಗಳಿಗೆ ವ್ಯಕ್ತಿಗತ ಸ್ವಾತಂತ್ರ್ಯಗಳಾವುವೆಂದು ನಿರ್ಧರಿಸುವ ಹಕ್ಕಿಲ್ಲ. ಈ ಹಕ್ಕನ್ನು ಸಂವಿಧಾನವು ಶಾಸನ ಸಭೆಗೆ ಸಂಪೂರ್ಣವಾಗಿ ಕೊಟ್ಟಿರುವುದು. ೨೧ನೆಯ ಅನುಚ್ಛೇದವು ೨೨ನೆಯ ಅನುಚ್ಛೇದದಿಂದ ಸಮರ್ಥಿಸಲ್ಪಟ್ಟು ರಾಷ್ಟ್ರವು ಯಾವನೊಬ್ಬ ವ್ಯಕ್ತಿಯ ಮೇಲೆ ಅಧಿಕಾರ ದುರುಪಯೋಗ ಮಾಡದಂತೆಯೂ ವಿಚಾರಣೆಯಿಲ್ಲದೆ ದೀರ್ಘ ಕಾಲ ಬಂದೀಖಾನೆಯಲ್ಲಿ ಇಡದಂತೆಯೂ ಪ್ರತಿಬಂಧಿಸುವುದು.

ಸಂವಿಧಾನದ ೨೩ನೆಯ ಅನುಚ್ಛೇದವು ವ್ಯಕ್ತಿಗತ ಮೂಲಭೂತ ಹಕ್ಕನ್ನು ಆಚರಣೆಗೆ ತರಲು ಅವಕಾಶವನ್ನು ಕಲ್ಪಿಸಿರುವುದು. ಈ ಅನುಚ್ಛೇದವಿಲ್ಲದಿದ್ದರೆ ೨೧ನೆಯ ಅನುಚ್ಛೇದದಲ್ಲ ಪ್ರತಿಪಾದಿತವಾದ ವ್ಯಕ್ತಿಗತ ಹಕ್ಕುಗಳಿಗೆ ಬೆಲೆ ಇರಲಿಲ್ಲ. ವ್ಯಕ್ತಿಯು ತನ್ನ ಮೂಲಭೂತ ಹಕ್ಕುಗಳಿಗೆ ಧಕ್ಕೆ ಬಂದಿದೆ ಎಂದು ಭಾವಿಸಿದಾಗ ಉಚ್ಚ ನ್ಯಾಯಾಲಯ (ಹೈಕೋರ್ಟು)ದಲ್ಲಾಗಲೀ ಪರಮ ನ್ಯಾಯಾಲಯ (ಸುಪ್ರೀಂ ಕೋರ್ಟು)ದಲ್ಲಾಗಲೀ ತನ್ನ ಹೇಳಿಕೆಯನ್ನು ಕೊಟ್ಟು ನ್ಯಾಯಾಲಯಗಳ ತೀರ್ಪನ್ನು ಅಂಗೀಕರಿಸಬಹುದು. ನ್ಯಾಯಾಲಯಗಳಿಗೆ ಖಂದೀ ಪ್ರತ್ಯಕ್ಷೀಕರಣ (ಹೇಬಿಯಸ್ ಕಾರ್ಪಸ್) ಪರಮಾದೇಶ (ಮಂಡಮಸ್) ಪ್ರತಿಷೇದ (ಪ್ರೊಹಿಬಿಷನ್) ಉತ್ಪ್ರೇಷಣ (ಸರ್ಟಿಯೊರಾರಿ) ಮತ್ತು ಅಧಿಕಾರಪೃಚ್ಛಾ (ಕ್ವೊವಾರ್ರಂಟೋ) ಮುಂತಾದ ಆಜ್ಞೆಗಳನ್ನು ಹೊರಡಿಸುವ ಅಧಿಕಾರವನ್ನು ಸಂವಿಧಾನವು ಕೊಟ್ಟಿರುವುದು. ರಾಷ್ಟ್ರವು ವ್ಯಕ್ತಿಗತ ಸ್ವಾತಂತ್ರ್ಯವನ್ನು ಕಾಪಾಡಲು ಕೆಲವು ಕಾರ್ಯಕ್ರಮಗಳನ್ನು ಮಾಡಬಾರದೆಂದು ಸಂವಿಧಾನವು ಹೇಳುವುದಾದರೆ ಪ್ರಸ್ತಾವನೆ (ಪ್ರಿಯಾಂಬ್ಲ್)ಯಲ್ಲಿ ಸೂಚಿಸಲಾದ ಸಂವಿಧಾನ ತತ್ವಗಳು ಆಚರಣೆಗೆ ಬರುವಂತೆ ನೋಡಿಕೊಳ್ಳಲು ಕೆಲವು ಕಾರ್ಯಕ್ರಮಗಳನ್ನು ಜಾರಿಗೆ ತರಲೇಬೇಕಾಗಿದೆ. ಈ ಕಾರ್ಯಕ್ರಮಗಳನ್ನು ನ್ಯಾಯಾಲಯದ ಮೂಲಕ ಅನುಷ್ಠಾನಕ್ಕೆ ತರಲು ಸೌಕರ್ಯವಿಲ್ಲವಾದರೂ ರಾಷ್ಟ್ರ ಸರಕಾರವು ಹೊಸ ಕಾನೂನುಗಳನ್ನು ಮಾಡಬೇಕಾದಾಗ ಅವುಗಳನ್ನು ಅನುಸರಿಸಿಯೇ ಮಾಡಬೇಕಾಗಿದೆ. ರಾಷ್ಟ್ರದ ಹಿತಕರ ಕಾರ್ಯಗಳನ್ನು ಆಚರಣೆಗೆ ತರುವಂತೆ ಶಾಸನಗಳನ್ನು ಮಾಡುವುದೇ ರಾಷ್ಟ್ರನೀತಿಯೂಗಿದೆ.

ಭಾರತದ ಒಕ್ಕೂಟದ ಕಾರ್ಯಾಂಗವು ರಾಷ್ಟ್ರಪತಿ (ಪ್ರೆಸಿಡೆಂಟ್) ಖಂಡು ನಾವು ತಿಳಿದಿದ್ದೇವೆ. ಒಕ್ಕೂಟ ಸರಕಾರದ ಕಾರ್ಯ ನಿರ್ವಹಣ ಅಧಿಕಾರವು ರಾಷ್ಟ್ರಪತಿಯಲ್ಲಿದೆ. ಸರಕಾರದ ಎಲ್ಲಾ ಕಾರ್ಯಕ್ರಮಗಳೂ ರಾಷ್ಟ್ರಪತಿಯ ಹೆಸರಿನಿಂದಲೇ ನಡೆಯುತ್ತದೆ ಇದರಿಂದ ರಾಷ್ಟ್ರಪತಿಯನ್ನು ಇಂಗ್ಲೆಂಡಿನ ರಾಜನಿಗೆ ಹೋಲಿಸಬಹುದಾದರೂ ಸ್ಥಾನಗೌರವದಿಂದ ಭಾರತೀಯ ರಾಷ್ಟ್ರಪತಿಯು ಇಂಗ್ಲೆಂಡಿನ ರಾಜನಿಗಿಂತಲೂ ಹೆಚ್ಚು ಪೂಜ್ಯನಾಗಿದ್ದಾನೆ. ರಾಷ್ಟ್ರಪತಿಯನ್ನು ಕೇಂದ್ರ ಶಾಸನ ಸಭೆಗಳ ಮತ್ತು ರಾಜ್ಯ ಶಾಸನ ಸಭೆಗಳ ಪ್ರತಿನಿಧಿಗಳು ಆರಿಸುತ್ತಾರೆ. ಐದು ವರ್ಷಕ್ಕೊಮ್ಮೆ ಹೊಸ ರಾಷ್ಟ್ರಪತಿಯು ಚುನಾವಣೆಯಾಗಬೇಕು. ಈ ಕಾಲಾವಧಿಯಲ್ಲಿ ರಾಷ್ಟ್ರಪತಿಯು ಸಂವಿಧಾನಕ್ಕೆ ವಿರುದ್ಧವಾಗಿ ನಡೆದರೆ ಅವನನ್ನು ಪದಚ್ಯುತನನ್ನಾಗಿ ಮಾಡುವ ಅಧಿಕಾರವು ಶಾಸನ ಸಭೆಗಳಿಗಿವೆ.

ಸಂವಿಧಾನವು ಉಪರಾಷ್ಟ್ರಪತಿಗೆ ಸ್ಥಾನವನ್ನು ಕಲ್ಪಿಸಿದೆ. ಉಪರಾಷ್ಟ್ರಪತಿಯು ಕೇಂದ್ರಶಾಸನ ಸಭೆಗಳ ಸದಸ್ಯರಿಂದ ಚುನಾಯಿತನಾಗುತ್ತಾನೆ. ಕೇಂದ್ರ ಶಾಸನ ಸಭೆಯ ಪರಿಷ್ಕ ಸಭೆ (ಅಪ್ಪರ್ ಹೌಸ್)ಗೆ ಉಪ ರಾಷ್ಟ್ರಪತಿಯೂ ಸ್ಥಾನಗೌರವದಿಂದ ಅಧ್ಯಕ್ಷನಾಗುತ್ತಾನೆ. ರಾಷ್ಟ್ರಪತಿಯು ಅನಿವಾರ್ಯ ಕಾರಣಗಳಿಂದ ಅಧಿಕಾರ ಸ್ಥಾನದಲ್ಲಿರಲು ಅಶಕ್ತನಾದರೆ ಉಪರಾಷ್ಟ್ರಪತಿಯು ರಾಷ್ಟ್ರಪತಿಯ ಅಧಿಕಾರಗಳನ್ನು ತಾತ್ಕಾಲಿಕವಾಗಿ ಚಲಾಯಿಸಬಹುದು. ರಾಷ್ಟ್ರಪತಿಯು ತನ್ನ ಮಂತ್ರಿಮಂಡಲದ ಸಲಹೆಯಂತೆ

THE JUBILEE INSURANCE CO., Ltd.

One of the very few in the feild of Insurance that has been declaring BONUS to its policy holders from its very inception.

RATE OF BONUS Rs. 10/- & Rs. 12/-

For particulars of Agency & Policy contracts apply to Sri P. C. KARAMBAYA of our Chief Agents at 41-C., Richmand Road, Bangalore.

Our Chief Agents:—THE ORIENTAL ENTERPRISES, BANGALORE 1.

ಜುಬಿಲಿ ಇನ್ಶೂರೆನ್ಸ್ ಕಂಪೆನಿ, ಲಿಮಿಟೆಡ್.

ಸ್ಥಾಪಿತವಾದಂದಿನಿಂದಲೂ ವಿಮೂದಾರರಿಗೆ ಸರಿಯೂದ ಬೋನಸ್ಸು ಕೊಡುತ್ತಿರುವ ಬಹು ಅಲ್ಪ ಸ್ವಲ್ಪ ವಿಮೂ ಕಂಪೆನಿಗಳಲ್ಲಿ ಜುಬಿಲಿಯು ಒಂದನೆಯದಾಗಿದೆ.

ಈಗಿನ ದರ ಬೋನಸ್ಸು:—ಪ್ರತಿ ಸಾವಿರಕ್ಕೆ ವರ್ಷಕ್ಕೆ ರೂ. 10/- ಮತ್ತು 12/-.

ಕಾರ್ಯಚತುರರಾದ ಆರ್ಗನೈಜರುಗಳೂ ಮತ್ತು ಏಜೆಂಟರುಗಳು ಬೇಕಾಗಿದ್ದಾರೆ. ವಿವರಗಳಿಗೆ ಈ ಕೆಳಗಿನ ಎಡ್ರೆಸ್ಸಿನ ನಮ್ಮ ಚೀಫ್ ಏಜೆಂಟರಿಗೆ ಒಡನೆ ಬರೆಯಿರಿ.

ದಿ ಓರಿಯಂಟಲ್ ಎಂಟರ್‌ಪ್ರೈಸಸ್,

41-C, ರಿಚ್‌ಮಂಡ್ ರೋಡ್, ಬೆಂಗಳೂರು 1.

25

— ನಿಮಗೆ ಅತ್ಯಂತ ಲಾಭದಾಯಕವಾಗಿ —
ವಿಮೆ ಮಾಡಲೂ ಅಥವಾ ಪ್ರತಿನಿಧಿಸಲೂ
ಇಂಡಿಯಾದ ಅತ್ಯಂತ ಹಳೆಯ ಮತ್ತು ಸುಭದ್ರತೆಯ ವಿಮಾ ಸಂಸ್ಥೆ.
ದಿ ಬಾಂಬೆ ಮ್ಯೂಚುವೆಲ್ ಲೈಫ್ ಅಷ್ಯೂರೆನ್ಸ್
ಸೊಸೈಟಿ, ಲಿಮಿಟೆಡ್.
[ಸ್ಥಾಪನೆ 1871]
ವಿವರಗಳಿಗೆ ಬರೆಯಿರಿ:—ಬ್ರಾಂಚ್ ಸೆಕ್ರೆಟರಿ,
172-3 ನರಸಿಂಹ ರಾಜಾ ರಸ್ತೆ (P. B. 186),
12-3 ಬೆಂಗಳೂರು 2, ಅಥವಾ ಫೋನ್ ಮಾಡಿ-3624.

ಕಾಂಗ್ರೆಸ್ ಶಾಸನ ಸಭಾ ಸದಸ್ಯರ ಪರಿಷತ್ತು.

ಕಾಂಗ್ರೆಸಿಗರು ತಮ್ಮ ಕರ್ತವ್ಯವನ್ನು ಮಾಡುವಾಗ ನಿಕಟ ಸಹಕಾರವು ಅತ್ಯವಶ್ಯವಿದೆಯೆಂದೂ, ಪಾರ್ಲಿಮೆಂಟಿನ ಪಕ್ಷ ಹಾಗೂ ಕಾಂಗ್ರೆಸ್ ವಿಧಾಯಕ ಕೆಲಸ ಮಾಡುವವರ ಪಕ್ಷ ಇವುಗಳ ನಡುವೆ ಇರುವ ಭೇದವನ್ನು ಮರೆಯಬೇಕೆಂದೂ ಕಾಂಗ್ರೆಸ್ ಅಧ್ಯಕ್ಷ ಶ್ರೀ ನೆಹರೂರವರು ತಾ. ೧೫ ರಲ್ಲಿ ಇಂದೂರಿನಲ್ಲಿ ನಡೆದ ಸಮಾರಂ ಭಂ ಕಾಂಗ್ರೆಸ್ ಶಾಸನ ಸಭಾಸದರ ಪರಿಷತ್ತಿನಲ್ಲಿ ಹೇಳಿದರು. ಕಾಂಗ್ರೆಸಿಗರು ಹೆಗೆ ಹೆಗಲು ಹಚ್ಚಿ ಮಾಡಬೇಕೆಂದೂ ಅವರು ಹೇಳಿದರು.

'ಕೇಂದ್ರದಲ್ಲಿಯೂ, ರಾಜ್ಯಗಳಲ್ಲಿಯೂ ಕಾಂಗ್ರೆಸ್ ಶಾಸನ ಸಭಾ ಪಕ್ಷಗಳ ಕೆಲವರಿಂದ ಅವುಗಳ ನಡುವೆ ಸಂಘರ್ಷವನ್ನೆಬ್ಬಿಸುವದಕ್ಕಾಗಿ ಪಾರ್ಲಿಮೆಂಟಿನಲ್ಲಿಯ ಕಾಂಗ್ರೆಸ್ ಪಕ್ಷ ಕಚೇರಿಯು ಒಂದು ಅಂಗವನ್ನು ರಚಿಸಿ, ಪಾರ್ಲಿಮೆಂಟರಿ ಕಾರ್ಯಕ್ರಮಗಳಿಗಾಗಿ ನಿಯಮಗಳನ್ನು ಹಾಕಿಸಿ ಸ್ತುಬದ್ಧ ಲಕ್ಷ್ಮಣವನ್ನು ಕಟ್ಟಬೇಕು.

'ಪ್ರತಿಯೊಂದು ಕಾಂಗ್ರೆಸ್ ಶಾಸನ ಸಭಾ ಪಕ್ಷಕ್ಕೆ ಸಂವ್ಯವಸ್ಥಿತ ಕಚೇರಿ ಇರಬೇಕು.

'ತಮ್ಮ ಶಾಸನ ಕಾರ್ಯದಲ್ಲಿ ಪಕ್ಷದ ಸದಸ್ಯರಿಗೆ ಸಹಾಯಕವಾಗುವಂತೆ ಒಂದು ಮಾರ್ಗದರ್ಶಕ ಮಂಡಳ ವಿರಬೇಕು. ಮಹತ್ವದ ಪ್ರಶ್ನೆಗಳ ಬಗ್ಗೆ ಅವಶ್ಯಕವಾದ ವಿಷಯಗಳನ್ನು ಸಂಗ್ರಹಿಸಿ ಪ್ರಕಟಿಸಬೇಕು. ಸದಸ್ಯರು ವೇಳೆಯಿಂದ ವೇಳೆ ತಮ್ಮ ಮತ ಕ್ಷೇತ್ರಗಳಿಗೆ ಸಂದರ್ಶನ ವಿತ್ತು ಸಮಸ್ಯಾ ಪರಿಹಾರದಲ್ಲಿ ಸಹಾಯ ಕರಾಗಬೇಕು. ಶಕ್ಯವಾದರೆ ಸದಸ್ಯರು ಪ್ರದೇಶ ಕಾಂಗ್ರೆಸ್ ಸಮಿತಿ ಸಹಕಾರಿ ದೊಂದಿಗೆ ಬೇರೆ ಮಂಡಲ ಕ್ಷೇತ್ರಗಳಿಗೂ ಸಂದರ್ಶನವಿಯಬೇಕು.

'ಆದ ಕಾರ್ಯದ ಪರಿಶೀಲನೆಗಾಗಿ ಅನುಭವ ವಿನಿಮಯಕ್ಕಾಗಿ ಧುರೀಣರೂ, ಕಾರ್ಯದರ್ಶಿಗಳೂ, ಕಾಂಗ್ರೆಸಿನ ಪ್ರಶೋದರರೂ ಸಮಸ್ಯೆಗಳನ್ನು ಚರ್ಚಿಸುವದಕ್ಕೋಸುಗ ಸಭೆ ಸೇರಬೇಕು.

ಚುನಾವಣೆಯಲ್ಲಿ ಜನತೆಯ ಮೇಲೆ ಕಾಂಗ್ರೆಸಿನ ಪ್ರಭಾವ ಬಿದ್ದಿರುವದರಿಂದ ಜನತೆಯಲ್ಲಿ ಚೇತನವನ್ನು ತುಂಬುವದರ ಸಲುವಾಗಿ ಕಾಂಗ್ರೆಸ ಸರಕಾರಗಳು ತಮ್ಮ ರಾಜ್ಯಗಳಲ್ಲಿ ಮಾಡುತ್ತಿರುವ ಕಾರ್ಯಗಳನ್ನು ನಿರೂಪಿಸುವದಕ್ಕಾಗಿ ಒಂದು ಪತ್ರಿಕೆಯನ್ನು ಕಾಂಗ್ರೆಸು ಪರವಾಗಿ ಹೊರಡಿಸಬೇಕು.

ಕಾಶ್ಮೀರ ಸಮಸ್ಯೆ ಬಿಡಿಸಲ್ಪಡಲಿಲ್ಲ.

ಕಾಶ್ಮೀರ ಪ್ರಕರಣದಲ್ಲಿ ಉಂಟಾಗಿರುವ ಬಿಕ್ಕಟ್ಟನ್ನು ಬಿಡಿಸುವದಕ್ಕಾಗಿ ಭಾರತ ಪಾಕಿಸ್ತಾನಗಳ ಮಂತ್ರಿಗಳ ಸಂಯುಕ್ತ ಸಭೆಯನ್ನು ಡಾ. ಗ್ರಹಾಮರು ಜಿನೀವಾದಲ್ಲಿ ಕರೆದಿದ್ದರಷ್ಟೆ. ಆ ಸಭೆಗೆ ಭಾರತದ ವತಿಯಿಂದ ಶ್ರೀ. ಗೋಪಾಲಸ್ವಾಮಿ ಅಯ್ಯಂಗಾರರು, ಪಾಕಿಖಂಡತ್ವದಲ್ಲಿ ಭಾರತದ ಪ್ರತಿನಿಧಿ ಮಂಡಳವೂ ಪಾಕಿಸ್ತಾನದ ವತಿಯಿಂದ ಮೌ. ಜ ಫ ಉಲ್ಲಾಖಾನರು ಪಾಕಿಖಂಡತ್ವದಲ್ಲಿ ಒಂದು ಪ್ರತಿನಿಧಿ ಮಂಡಲವೂ ಹೋಗಿದ್ದರು. ಡಾ. ಗ್ರಹಾಮರು ಈ ಇಬ್ಬರಿಂ ಮಂತ್ರಿಗಳೊಡನೆ ಒಟ್ಟಿನಲ್ಲಿ ಕೆಲಸಲ್ಲ, ಪ್ರತ್ಯೇಕವಾಗಿ ಕೆಲಸಲ ಮಾತುಕತೆ ನಡೆಸಿದರು. ಮಾತುಕತೆಗಳ ಸ್ನೇಹಮಯ ವಾತಾವರಣದಲ್ಲಿ ನಡೆದವು. ಆದರೆ ಮೂಲ ಪ್ರಶ್ನೆ ಅಂದರೆ ನಿಸ್ಸೈನೀಕರಣ ರೇಖೆಯ ಎಂಬ ಒದಿಗಳಲ್ಲಿ ಈ ಎರಡೂ ರಾಷ್ಟ್ರಗಳ ಸೈನ್ಯದ ಪ್ರಮಾಣವೆಷ್ಟಿರಬೇಕೆಂಬ ಪ್ರಶ್ನೆಯ ಬಗ್ಗೆ ಕೊನೆಗೂ ಒಮ್ಮತವಾಗಲಿಲ್ಲ.

ಇದೇ ಸಂದರ್ಭದಲ್ಲಿ ಆ ಗುಪ್ತ ಕಾಶ್ಮೀರದಲ್ಲಿ ಬೀಡು ಬಿಟ್ಟಿರುವ ಪಾಕಿಸ್ತಾನ ಸೈನ್ಯವನ್ನು ಹಿಂತೆಗೆದುಕೊಂಡ ನಂತರ ಅಲ್ಲಿಯ ಆಡಳಿತವನ್ನು ಯಾರು ವಹಿಸಬೇಕೆಂಬ ಬಗ್ಗೆ ಚರ್ಚೆ ನಡೆದಾಗ ಯು. ರಾ. ಸಂಘದಿಂದ ನೇಮಿಸಲ್ಪಟ್ಟ ಅಧಿಕಾರಿಗಳು ಅಲ್ಲಿಯ ಆಡಳಿತವನ್ನು ನೋಡಿಕೊಳ್ಳಬೇಕು. ಎಂದು ಭಾರತ ಸರಕಾರದ ಅಭಿಪ್ರಾಯವಿತ್ತು. ಸ್ಥಳಿಕ ಅಧಿಕಾರಿಗಳು ನೋಡಿಕೊಳ್ಳಬೇಕೆಂದು ಪಾಕಿಸ್ತಾನದ ಹೇಳಿಕೆ ಇತ್ತು. ಹೀಗಾಗಿ ಆ ಪ್ರಶ್ನೆಯೂ ಅನಿರ್ಣೀತವಾಗಿಯೆ ಉಳಿಯಿತು.

ಕೊನೆಗೆ ಎರಡು ವಾರಗಳ ವರೆಗೆ ನಡೆದ ಈ ಪರಿಷತ್ತಿನಿಂದ ಯಾವುದೇ ಪ್ರಯೋಜನವಾಗದೆ ಪರಿಷತ್ತು ಕೊನೆಗೊಂಡಿತು. ಭಾರತದ ಶ್ರೀ. ಗೋಪಾಲಸ್ವಾಮಿ ಅಯ್ಯಂಗಾರರು ಈಗಾಗಲೇ ಭಾರತಕ್ಕೆ ಹೊರಟೂ ಬಂದರು.

ಡಾ. ಗ್ರಹಾಮರು ಅಲ್ಲಿಯೇ ಕೆಲ ದಿನಗಳ ವರೆಗೆ ಉಳಿದುಕೊಂಡು ಜಾಗತಿಕ ಭದ್ರತಾ ಮಂಡಳಿಕ್ಕೆ ತಾವು ಒಪ್ಪಿಸಲಿರುವ ವರದಿಯನ್ನು ಸಿದ್ಧಪಡಿಸುವರು.

ಲೆಯೇ ವರ್ತಿಸಬಹುದಾದ್ದರಿಂದ ಜನತಾ ಪ್ರತಿನಿಧಿಗಳಿರುವ ಲೋಕಸಭೆ (ಲೋವರ್ ಹೌಸ್)ಗೆ ಜವಾಬ್ದಾರರಾದ ಮಂತ್ರಿಗಳ ಅಭಿಪ್ರಾಯದಂತೆ ವರ್ತಿಸುವುದರಿಂದ ರಾಷ್ಟ್ರಪತಿಯು ಜನಾಭಿಪ್ರಾಯವನ್ನು ಅಲ್ಲಗಳೆಯಲು ಅಸಾಧ್ಯವೆಂಬಾಯಿತು.

ಕೇಂದ್ರಶಾಸನಸಭೆಯಲ್ಲಿ ರಾಷ್ಟ್ರಪತಿಯಿಂದೊಡಗೂಡಿದ ವರಿಷ್ಠ ಸಭೆ ಅಥವಾ ರಾಜ್ಯಪರಿಷತ್ತೂ (ಕೌನ್ಸಿಲ್ ಆಫ್ ಸ್ಟೇಟ್ ಯೂ ಅಪ್ಪರ್ ಹೌಸ್) ಮತ್ತು ಲೋಕಸಭೆಯೆಂಬ ಪ್ರಜಾಪ್ರತಿನಿಧಿ ಸಭೆಯೂ ಅಡಕವಾಗಿವೆ. ರಾಜ್ಯ ಪರಿಷತ್ತಿನಲ್ಲಿ ೨೫೦ ಸದಸ್ಯರಿರುವರು. ಇವರಲ್ಲಿ ೧೨ ಜನರನ್ನು ರಾಷ್ಟ್ರಪತಿಯು ನಿಯಮಿಸುವನು ಉಳಿದ ಸದಸ್ಯರು ವಿವಿಧ ರಾಜ್ಯಗಳ ಪ್ರತಿನಿಧಿಗಳಾಗಿರುವರು. ರಾಜ್ಯಪರಿಷತ್ತು ಶಾಶ್ವತ ಸಭೆಯಾಗಿದ್ದು ಇದರಲ್ಲಿನೇ ಒಂದು ಭಾಗದ ಸದಸ್ಯರು ಎರಡು ವರ್ಷಗಳಿಗೊಮ್ಮೆ ನಿವೃತ್ತರಾಗುವರು. ಲೋಕಸಭೆಯಲ್ಲಿ ರಾಷ್ಟ್ರದಾದ್ಯಂತ ಪ್ರೌಢ ಮತದಾನ ಪದ್ಧತಿಗನ್ವಯಿಸಿ ಚುನಾಯಿತರಾದ ೫೦೦ಕ್ಕಿಂತ ಹೆಚ್ಚಿಲ್ಲದ ಜನತಾ ಪ್ರತಿನಿಧಿಗಳಿರುವರು. ಲೋಕಸಭೆಯು ಐದು ವರ್ಷಕ್ಕೊಮ್ಮೆ ವಿಸರ್ಜಿಸಲ್ಪಟ್ಟು ಹೊಸ ಲೋಕಸಭೆಯು ರಚಿಸಿಕೊಳ್ಳುವುದು.

ಕೇಂದ್ರ ಶಾಸನ ಸಭೆಗಳಿಗೂ ರಾಜ್ಯ ಶಾಸನ ಸಭೆಗಳಿಗೂ ಪ್ರತಿನಿಧಿಗಳನ್ನು ಆರಿಸುವಾಗ ಚುನಾವಣೆಯು ನಿಷ್ಪಕ್ಷಪಾತವಾಗಿಯೂ ಶಾಸನಬದ್ಧವಾಗಿಯೂ ನಡೆಯುವಂತೆ ಒಬ್ಬ ಮಹಾ ಚುನಾವಣಾಧಿಕಾರಿಯನ್ನು ರಾಷ್ಟ್ರಪತಿಯು ನಿಯಮಿಸುವನು. ಮಹಾ ಚುನಾವಣಾಧಿಕಾರಿಯು ತನ್ನ ಕ್ಷೇತ್ರದಲ್ಲಿ ಸ್ವತಂತ್ರನಾಗಿದ್ದು ನಿಷ್ಪಕ್ಷಪಾತವಾಗಿ ಚುನಾವಣೆಗಳು ನಡೆಯುವಂತೆ ನೋಡಿಕೊಳ್ಳುವನು. ಭಾರತದಲ್ಲಿ ಹಿಂದೆ ಆಚರಣೆಯಲ್ಲಿದ್ದ ಮತೀಯ ಚುನಾವಣಾ ಕ್ಷೇತ್ರಗಳು ವರ್ಜಿತವಾಗಿ ಪ್ರೌಢ ಮತದಾನ ಪದ್ಧತಿಗನುಸರಿಸಿದ ಸಾರ್ವತ್ರಿಕ ಮಹಾ ಚುನಾವಣೆಯು ನಡೆಯುವುದು.

ಶಾಸನ ಸಭೆಗಳಲ್ಲಿ ಯಾವುದಾದರೊಂದು ಶಾಸನವು ಜಾರಿಗೆ ಬರಬೇಕಾದರೆ ಆ ಸೂದೆಗಳು ಲೋಕಸಭೆ ಅಥವಾ ರಾಜ್ಯಪರಿಷತ್ತಿನಲ್ಲಿ ಮಂಡಿಸಲ್ಪಟ್ಟು ಎರಡೂ ಸಭೆಗಳಿಂದಲೂ ಚರ್ಚಿಸಲ್ಪಟ್ಟು ಒಪ್ಪಿಗೆ ಪಡೆದು ರಾಷ್ಟ್ರಪತಿಯಿಂದ ಅಂಗೀಕೃತವಾಗಬೇಕು. ಹಣಕಾಸಿನ ವಿಷಯ ಮಾರೂಪಿಗಳು ಮಾತ್ರ ಲೋಕಸಭೆಯಲ್ಲಿ ಮಂಡಿಸಲ್ಪಡಬೇಕು. ಇತರ ಯಾವುದಾದರೂ ಸಮಸ್ಯೆಗಳ ಮಸೂದೆಯು ಯಾವುದಾದರೊಂದು ಸಭೆಯಲ್ಲಿ ಮಂಡಿಸಲ್ಪಟ್ಟು ಎರಡು ಸಭೆಗಳೂ ಚರ್ಚಿಸಿದಾಗ ಒಂದು ಸಭೆಯ ಅಭಿಪ್ರಾಯವು ಮತ್ತೊಂದಕ್ಕೆ ವಿರುದ್ಧವಾದರೆ ರಾಷ್ಟ್ರಪತಿಯು ಎರಡು ಸಭೆಗಳ ಸಂಯುಕ್ತ ಅಧಿವೇಶನವನ್ನು ಕರೆದು ಎರಡು ಸಭೆಗಳಲ್ಲಿ ಬಹುಮತಾಭಿಪ್ರಾಯವನ್ನು ತೆಗೆದು ಮಸೂದೆಯನ್ನು ಅಂಗೀಕರಿಸಿ ಶಾಸನವನ್ನಾಗಿ ಮಾಡಬಹುದು. ಹೀಗೆ ಮಸೂದೆಗಳು ಮೊತ್ರ ಲೋಕಸಭೆಯಲ್ಲೇ ಮಂಡಿಸಲ್ಪಡಬೇಕು. ಇತರ ಮಸೂದೆಯು ಯಾವುದಾದರೊಂದು ಸಭೆಯಲ್ಲಿ ಮಂಡಿಸಲ್ಪಟ್ಟು ಎರಡು ಸಭೆಗಳಿಂದಲೂ ಅಂಗೀಕೃತವಾದ ಮೇಲೆ ರಾಷ್ಟ್ರಪತಿಯ ಸಹಿಗಾಗಿ ಕಳುಹಿಸಲ್ಪಡುವುದು. ಆಗ ರಾಷ್ಟ್ರಪತಿಯು ಮಸೂದೆಗೆ ಸಹಿ ಮಾಡಿದರೆ ಅದು ಶಾಸನವಾಗುವುದು. ಸಹಿ ಮಾಡದೆ ಅದನ್ನು ಪುನರ್ವಿಮರ್ಶೆಗಾಗಿ ಲೋಕಸಭೆಯ ಮುಂದೆ ಮಂಡಿಸಲು ಸೂಚಿಸಬಹುದು. ಆಗ ಲೋಕಸಭೆಯು ಮಸೂದೆಯನ್ನು ಪುನಃ ಅಂಗೀಕರಿಸಿ ಕಳುಹಿಸಿದರೆ ರಾಷ್ಟ್ರಪತಿಯು ಸಹಿ ಮಾಡಲೇಬೇಕು. ಹೀಗೆ ಲೋಕಸಭೆಯ ಮಸೂದೆಗಳು ಮೊತ್ರ ಲೋಕಸಭೆಯಲ್ಲೇ ಮಂಡಿಸಲ್ಪಡಬೇಕಾಗಿರುವುದರಿಂದ ರಾಷ್ಟ್ರಪತಿಯು ಲೋಕಸಭೆಯ ಅಭಿಪ್ರಾಯವನ್ನು ಅಲ್ಲಗಳೆಯಲು ಅಸಾಧ್ಯವೆಂಬಾಯಿತು.

ಕೇಂದ್ರಶಾಸನಸಭೆಯಲ್ಲಿ ರಾಷ್ಟ್ರಪತಿಯಿಂದೊಡಗೂಡಿದ ವರಿಷ್ಠ ಸಭೆ ಅಥವಾ ರಾಜ್ಯಪರಿಷತ್ತೂ (ಕೌನ್ಸಿಲ್ ಆಫ್ ಸ್ಟೇಟ್ ಯೂ ಅಪ್ಪರ್ ಹೌಸ್) ಮತ್ತು ಲೋಕಸಭೆಯೆಂಬ ಪ್ರಜಾಪ್ರತಿನಿಧಿ ಸಭೆಯೂ ಅಡಕವಾಗಿವೆ. ರಾಜ್ಯ ಪರಿಷತ್ತಿನಲ್ಲಿ ೨೫೦ ಸದಸ್ಯರಿರುವರು. ಇವರಲ್ಲಿ ೧೨ ಜನರನ್ನು ರಾಷ್ಟ್ರಪತಿಯು ನಿಯಮಿಸುವನು ಉಳಿದ ಸದಸ್ಯರು ವಿವಿಧ ರಾಜ್ಯಗಳ ಪ್ರತಿನಿಧಿಗಳಾಗಿರುವರು. ರಾಜ್ಯಪರಿಷತ್ತು ಶಾಶ್ವತ ಸಭೆಯಾಗಿದ್ದು ಇದರಲ್ಲಿನೇ ಒಂದು ಭಾಗದ ಸದಸ್ಯರು ಎರಡು ವರ್ಷಗಳಿಗೊಮ್ಮೆ ನಿವೃತ್ತರಾಗುವರು. ಲೋಕಸಭೆಯಲ್ಲಿ ರಾಷ್ಟ್ರದಾದ್ಯಂತ ಪ್ರೌಢ ಮತದಾನ ಪದ್ಧತಿಗನ್ವಯಿಸಿ ಚುನಾಯಿತರಾದ ೫೦೦ಕ್ಕಿಂತ ಹೆಚ್ಚಿಲ್ಲದ ಜನತಾ ಪ್ರತಿನಿಧಿಗಳಿರುವರು. ಲೋಕಸಭೆಯು ಐದು ವರ್ಷಕ್ಕೊಮ್ಮೆ ವಿಸರ್ಜಿಸಲ್ಪಟ್ಟು ಹೊಸ ಲೋಕಸಭೆಯು ರಚಿಸಿಕೊಳ್ಳುವುದು.

ಕೇಂದ್ರ ಶಾಸನ ಸಭೆಗಳಿಗೂ ರಾಜ್ಯ ಶಾಸನ ಸಭೆಗಳಿಗೂ ಪ್ರತಿನಿಧಿಗಳನ್ನು ಆರಿಸುವಾಗ ಚುನಾವಣೆಯು ನಿಷ್ಪಕ್ಷಪಾತವಾಗಿಯೂ ಶಾಸನಬದ್ಧವಾಗಿಯೂ ನಡೆಯುವಂತೆ ಒಬ್ಬ ಮಹಾ ಚುನಾವಣಾಧಿಕಾರಿಯನ್ನು ರಾಷ್ಟ್ರಪತಿಯು ನಿಯಮಿಸುವನು. ಮಹಾ ಚುನಾವಣಾಧಿಕಾರಿಯು ತನ್ನ ಕ್ಷೇತ್ರದಲ್ಲಿ ಸ್ವತಂತ್ರನಾಗಿದ್ದು ನಿಷ್ಪಕ್ಷಪಾತವಾಗಿ ಚುನಾವಣೆಗಳು ನಡೆಯುವಂತೆ ನೋಡಿಕೊಳ್ಳುವನು. ಭಾರತದಲ್ಲಿ ಹಿಂದೆ ಆಚರಣೆಯಲ್ಲಿದ್ದ ಮತೀಯ ಚುನಾವಣಾ ಕ್ಷೇತ್ರಗಳು ವರ್ಜಿತವಾಗಿ ಪ್ರೌಢ ಮತದಾನ ಪದ್ಧತಿಗನುಸರಿಸಿದ ಸಾರ್ವತ್ರಿಕ ಮಹಾ ಚುನಾವಣೆಯು ನಡೆಯುವುದು.

ಶಾಸನ ಸಭೆಗಳಲ್ಲಿ ಯಾವುದಾದರೊಂದು ಶಾಸನವು ಜಾರಿಗೆ ಬರಬೇಕಾದರೆ ಆ ಸೂದೆಗಳು ಲೋಕಸಭೆ ಅಥವಾ ರಾಜ್ಯಪರಿಷತ್ತಿನಲ್ಲಿ ಮಂಡಿಸಲ್ಪಟ್ಟು ಎರಡೂ ಸಭೆಗಳಿಂದಲೂ ಚರ್ಚಿಸಲ್ಪಟ್ಟು ಒಪ್ಪಿಗೆ ಪಡೆದು ರಾಷ್ಟ್ರಪತಿಯಿಂದ ಅಂಗೀಕೃತವಾಗಬೇಕು. ಹಣಕಾಸಿನ ವಿಷಯ ಮಾರೂಪಿಗಳು ಮಾತ್ರ ಲೋಕಸಭೆಯಲ್ಲೇ ಮಂಡಿಸಲ್ಪಡಬೇಕು. ಇತರ ಯಾವುದಾದರೂ ಸಮಸ್ಯೆಗಳ ಮಸೂದೆಯು ಯಾವುದಾದರೊಂದು ಸಭೆಯಲ್ಲಿ ಮಂಡಿಸಲ್ಪಟ್ಟು ಎರಡು ಸಭೆಗಳಿಂದಲೂ ಚರ್ಚಿಸಿದಾಗ ಒಂದು ಸಭೆಯ ಅಭಿಪ್ರಾಯವು ಮತ್ತೊಂದಕ್ಕೆ ವಿರುದ್ಧವಾದರೆ ರಾಷ್ಟ್ರಪತಿಯು ಎರಡು ಸಭೆಗಳ ಸಂಯುಕ್ತ ಅಧಿವೇಶನವನ್ನು ಕರೆದು ಎರಡು ಸಭೆಗಳಲ್ಲಿ ಬಹುಮತಾಭಿಪ್ರಾಯವನ್ನು ತೆಗೆದು ಮಸೂದೆಯನ್ನು ಅಂಗೀಕರಿಸಿ ಶಾಸನವನ್ನಾಗಿ ಮಾಡಬಹುದು. ಹೀಗೆ ಮಸೂದೆಗಳು ಮೊತ್ರ ಲೋಕಸಭೆಯಲ್ಲೇ ಮಂಡಿಸಲ್ಪಡಬೇಕಾಗಿರುವುದರಿಂದ ರಾಷ್ಟ್ರಪತಿಯು ಲೋಕಸಭೆಯ ಅಭಿಪ್ರಾಯವನ್ನು ಅಲ್ಲಗಳೆಯಲು ಅಸಾಧ್ಯವೆಂಬಾಯಿತು.

ಕೇಂದ್ರಶಾಸನಸಭೆಯಲ್ಲಿ ರಾಷ್ಟ್ರಪತಿಯಿಂದೊಡಗೂಡಿದ ವರಿಷ್ಠ ಸಭೆ ಅಥವಾ ರಾಜ್ಯಪರಿಷತ್ತೂ (ಕೌನ್ಸಿಲ್ ಆಫ್ ಸ್ಟೇಟ್ ಯೂ ಅಪ್ಪರ್ ಹೌಸ್) ಮತ್ತು ಲೋಕಸಭೆಯೆಂಬ ಪ್ರಜಾಪ್ರತಿನಿಧಿ ಸಭೆಯೂ ಅಡಕವಾಗಿವೆ. ರಾಜ್ಯ ಪರಿಷತ್ತಿನಲ್ಲಿ ೨೫೦ ಸದಸ್ಯರಿರುವರು. ಇವರಲ್ಲಿ ೧೨ ಜನರನ್ನು ರಾಷ್ಟ್ರಪತಿಯು ನಿಯಮಿಸುವನು ಉಳಿದ ಸದಸ್ಯರು ವಿವಿಧ ರಾಜ್ಯಗಳ ಪ್ರತಿನಿಧಿಗಳಾಗಿರುವರು. ರಾಜ್ಯಪರಿಷತ್ತು ಶಾಶ್ವತ ಸಭೆಯಾಗಿದ್ದು ಇದರಲ್ಲಿನೇ ಒಂದು ಭಾಗದ ಸದಸ್ಯರು ಎರಡು ವರ್ಷಗಳಿಗೊಮ್ಮೆ ನಿವೃತ್ತರಾಗುವರು. ಲೋಕಸಭೆಯಲ್ಲಿ ರಾಷ್ಟ್ರದಾದ್ಯಂತ ಪ್ರೌಢ ಮತದಾನ ಪದ್ಧತಿಗನ್ವಯಿಸಿ ಚುನಾಯಿತರಾದ ೫೦೦ಕ್ಕಿಂತ ಹೆಚ್ಚಿಲ್ಲದ ಜನತಾ ಪ್ರತಿನಿಧಿಗಳಿರುವರು. ಲೋಕಸಭೆಯು ಐದು ವರ್ಷಕ್ಕೊಮ್ಮೆ ವಿಸರ್ಜಿಸಲ್ಪಟ್ಟು ಹೊಸ ಲೋಕಸಭೆಯು ರಚಿಸಿಕೊಳ್ಳುವುದು.

ಕೇಂದ್ರ ಶಾಸನ ಸಭೆಗಳಿಗೂ ರಾಜ್ಯ ಶಾಸನ ಸಭೆಗಳಿಗೂ ಪ್ರತಿನಿಧಿಗಳನ್ನು ಆರಿಸುವಾಗ ಚುನಾವಣೆಯು ನಿಷ್ಪಕ್ಷಪಾತವಾಗಿಯೂ ಶಾಸನಬದ್ಧವಾಗಿಯೂ ನಡೆಯುವಂತೆ ಒಬ್ಬ ಮಹಾ ಚುನಾವಣಾಧಿಕಾರಿಯನ್ನು ರಾಷ್ಟ್ರಪತಿಯು ನಿಯಮಿಸುವನು. ಮಹಾ ಚುನಾವಣಾಧಿಕಾರಿಯು ತನ್ನ ಕ್ಷೇತ್ರದಲ್ಲಿ ಸ್ವತಂತ್ರನಾಗಿದ್ದು ನಿಷ್ಪಕ್ಷಪಾತವಾಗಿ ಚುನಾವಣೆಗಳು ನಡೆಯುವಂತೆ ನೋಡಿಕೊಳ್ಳುವನು. ಭಾರತದಲ್ಲಿ ಹಿಂದೆ ಆಚರಣೆಯಲ್ಲಿದ್ದ ಮತೀಯ ಚುನಾವಣಾ ಕ್ಷೇತ್ರಗಳು ವರ್ಜಿತವಾಗಿ ಪ್ರೌಢ ಮತದಾನ ಪದ್ಧತಿಗನುಸರಿಸಿದ ಸಾರ್ವತ್ರಿಕ ಮಹಾ ಚುನಾವಣೆಯು ನಡೆಯುವುದು.

ಶಾಸನ ಸಭೆಗಳಲ್ಲಿ ಯಾವುದಾದರೊಂದು ಶಾಸನವು ಜಾರಿಗೆ ಬರಬೇಕಾದರೆ ಆ ಸೂದೆಗಳು ಲೋಕಸಭೆ ಅಥವಾ ರಾಜ್ಯಪರಿಷತ್ತಿನಲ್ಲಿ ಮಂಡಿಸಲ್ಪಟ್ಟು ಎರಡೂ ಸಭೆಗಳಿಂದಲೂ ಚರ್ಚಿಸಲ್ಪಟ್ಟು ಒಪ್ಪಿಗೆ ಪಡೆದು ರಾಷ್ಟ್ರಪತಿಯಿಂದ ಅಂಗೀಕೃತವಾಗಬೇಕು. ಹಣಕಾಸಿನ ವಿಷಯ ಮಾರೂಪಿಗಳು ಮಾತ್ರ ಲೋಕಸಭೆಯಲ್ಲೇ ಮಂಡಿಸಲ್ಪಡಬೇಕು. ಇತರ ಯಾವುದಾದರೂ ಸಮಸ್ಯೆಗಳ ಮಸೂದೆಯು ಯಾವುದಾದರೊಂದು ಸಭೆಯಲ್ಲಿ ಮಂಡಿಸಲ್ಪಟ್ಟು ಎರಡು ಸಭೆಗಳಿಂದಲೂ ಚರ್ಚಿಸಿದಾಗ ಒಂದು ಸಭೆಯ ಅಭಿಪ್ರಾಯವು ಮತ್ತೊಂದಕ್ಕೆ ವಿರುದ್ಧವಾದರೆ ರಾಷ್ಟ್ರಪತಿಯು ಎರಡು ಸಭೆಗಳ ಸಂಯುಕ್ತ ಅಧಿವೇಶನವನ್ನು ಕರೆದು ಎರಡು ಸಭೆಗಳಲ್ಲಿ ಬಹುಮತಾಭಿಪ್ರಾಯವನ್ನು ತೆಗೆದು ಮಸೂದೆಯನ್ನು ಅಂಗೀಕರಿಸಿ ಶಾಸನವನ್ನಾಗಿ ಮಾಡಬಹುದು. ಹೀಗೆ ಮಸೂದೆಗಳು ಮೊತ್ರ ಲೋಕಸಭೆಯಲ್ಲೇ ಮಂಡಿಸಲ್ಪಡಬೇಕಾಗಿರುವುದರಿಂದ ರಾಷ್ಟ್ರಪತಿಯು ಲೋಕಸಭೆಯ ಅಭಿಪ್ರಾಯವನ್ನು ಅಲ್ಲಗಳೆಯಲು ಅಸಾಧ್ಯವೆಂಬಾಯಿತು.

ಜನತೆಗೆ ಕಾಂಗ್ರೆಸ್ ಅಧ್ಯಕ್ಷರ ಕರೆ.

ರಾಷ್ಟ್ರದ ದಾರಿದ್ರ್ಯ ಪರಿಹಾರಕ್ಕಾಗಿ ಜನತೆಯು ಸರ್ಕಾರದೊಡನೆ ಸಹಕಾರದಿಂದ ಶ್ರಮಿಸಬೇಕೆಂದು ಕಾಂಗ್ರೆಸ್ ಅಧ್ಯಕ್ಷ ಪಂಡಿತ ಜವಹರಲಾಲ್ ನೆಹ್ರೂರವರು ತಾ ೧೫ರಲ್ಲಿ ಇಂದೂರಿನಲ್ಲಿ ಎ. ಐ. ಸಿ. ಸಿ. ಅಧಿವೇಶನದಲ್ಲಿ ಧ್ವಜಾರೋಹಣ ಮಾಡುತ್ತಾ ಹೇಳಿದರು.

'ಚಂದ್ರಶೇಖರ ನಗರ'ದಲ್ಲಿ ನಡೆದ ಈ ಸಮಾರಂಭಕ್ಕಾಗಿ ಸೇರಿದ್ದ ಮಹಾ ಜನಸಮೂಹದಾಯವನ್ನುದ್ದೇಶಿಸಿ ಭಾಷಣ ಮಾಡುತ್ತಾ ಪಂಡಿತ ನೆಹ್ರೂರವರು, ಕೇವಲ ಭಾಷಣಗಳು ಅಥವಾ ನಿರ್ಣಯಗಳಿಂದ ರಾಷ್ಟ್ರದ ಉದ್ಧಾರವಾಗುವುದಿಲ್ಲ ಅಥವಾ ಸರ್ಕಾರವನ್ನು ಖಂಡಿಸುವುದೊಂದರಿಂದಲೇ ಕೂಡಾ ಯಾವ ಸಹಾಯವೂ ಆಗದು' ಎಂದೂ ಒತ್ತಿ ನುಡಿದರು.

ಸರ್ಕಾರದವರು ಕಷ್ಟ ಮಾಡಿದಾಗ ಅದನ್ನು ಎತ್ತಿ ತೋರಿಸಿ ಅವರಿಗೆ ಪಾಠ ಕಲಿಸಬೇಕಾದದ್ದು ಪ್ರತಿಯೊಬ್ಬರ ಕರ್ತವ್ಯ ಆದರೆ ಪ್ರತಿಯೊಬ್ಬ ಪ್ರಜೆಯೂ ದೇಶಕ್ಕಾಗಿ ಏನು ಮಾಡುತ್ತಿದ್ದಾನೆಂಬುದೂ ಅಷ್ಟೇ ಪ್ರಮುಖವಾದುದು. ಪ್ರತಿ ಪ್ರಜೆಯೂ ಮಾಡುವ ಕೆಲಸವೇ ತೀನೆಗೆ ಲೆಕ್ಕಕ್ಕೆ ಬರುವುದು. ಪ

॥ ಇಂದಿನ ನೈತಿಕ ಮಟ್ಟದ ಅಧೋಗತಿ! ॥

ಹಿಂದಕ್ಕೆ, ನಮ್ಮ ಸಾಮಾಜಿಕ ಜೀವನದಲ್ಲಿ ಪ್ರಾಮಾಣಿಕತನ, ವಿಶ್ವಾಸ, ಸತ್ ಶೀಲ ಮೊದಲಾದ ಸದ್ಗುಣಗಳು ಎಲ್ಲೆಲ್ಲಿಯೂ ಎದ್ದು ಕಾಣುತ್ತಿದ್ದವು. ಇದೇ ನೂ ನೂರಾರು ವರ್ಷಗಳ ಹಿಂದಿನ ಮಾತಲ್ಲ. ಈ ಶತಮಾನದ ಮೊದಲಿನ ಇಪ್ಪತ್ತು ವರ್ಷಗಳು ಮೀಗಿಯುವ ವರೆಗೂ ಈ ಸದ್ಗುಣಗಳಿಂದ ನಮ್ಮ ಸಾಮಾಜಿಕ ಜೀವ ಳವು ಪ್ರೀತಿಕರವಾಗಿ ಸಾಗಿತ್ತು.

ಜನರಿಗೆ ಕಳ್ಳಕಾಕರ ಹೆದರಿಕೆ ಅಷ್ಟೊಂ ದಿದ್ದಿಲ್ಲ. ಮನೆಗಳಿಗೆ ಕೀಲಿ ಕುರಿಪೆಗಳು ಕೂಡ ಇರುತ್ತಿದ್ದಿಲ್ಲ. ಮನೆಗೆ ಬೆಲಕ ಹಾಕಿ ಹೊಲ ಗದ್ದೆಗಳಿಗೂ ಎಂಟೆಂಟು ದಿ ವಸ ಪರ ಊರಿಗೂ ಮನೆಯವನು ಹೋ ಗುತ್ತಿದ್ದರೂ ಅವಳಿಗೆ ತನ್ನ ಮನೆಯ, ಮ ನೆಯೊಳಗಿನ ಆಸ್ತಿಯ ಸುರಕ್ಷಿತತೆಯ ಬ ಗ್ಗೆ ಯೋಚನೆ ಇರುತ್ತಿದ್ದಿಲ್ಲ.

ಹಣ ಕೊಡುವದೂ ತೆಗೆದುಕೊಳ್ಳುವ ದೂ ಬಾಯಿಮಾತಿನಿಂದಲೇ ನಡೆಯುತ್ತಿತ್ತು; ಕಾಗದ ಪತ್ರಗಳ ಅಥವಾ ಸ್ಟಾಂಪು ಸೇವಂಜಣಿಗಳ ಆವಶ್ಯಕತೆ ಅಷ್ಟೊಂ ದು ಅನಿಸುತ್ತಿದ್ದಿಲ್ಲ ಸ್ಥಿತಿಯೊಬ್ಬನೂ ಕಾನಾಡಿದ ಮಾತಿಗೆ ಬದ್ಧನಾಗುತ್ತಿದ್ದ, ಅದಕ್ಕೆ ಕಾರಣವೆಂದರೆ ನ್ಯಾಯ ನೀತಿಗಳ ಕಟ್ಟಿಗೆ ಅವನು ಬದ್ಧನಾಗಿದ್ದ.

ಬರಬರುತ್ತ ಮನುಷ್ಯನಲ್ಲಿಯ ಅ ನೀತಿಯ ಕಲ್ಪನೆ ಇಳಿಮುಖವಾಗುತ್ತ ನ ಡೆಯಿತು. ಕಾಯಿದೆ ಕಾನೂನುಗಳ ಸಂ ಖೆದಾಟಕ್ಕಾರಂಭವಾಯಿತು. ಕಾಯಿದೆ ಗಳೂ ಕಟ್ಟು ಕಟ್ಟಳೆಗಳೂ ಹೆಚ್ಚುತ್ತ ಸಾ ಗಿದಂತೆ ಅವುಗಳ ಉಲ್ಲಂಘನೆಯೂ ಬೆಳೆ ಯುತ್ತ ನಡೆಯಿತು. ಹೀಗಾಗಿ ಇಂದು ಹೆಜ್ಜೆಗೊಂದು ಕಾಯಿದೆ, ಮಾತಿಗೊಂದು ಅಜ್ಞೆ ಹೊಡಿಸುತ್ತಿರುವವಾದರೂ ನೀತಿ ಯ ವಟ್ಟ ಮಾತ್ರ ತೀರ ಅಧಃಪತನ ಹೊಂದಿದೆಯೆಂಬುದನ್ನು ಯಾರೂ ಅಲ್ಲಗಳೆಯಲಾರರು.

ದುರ್ದೈವದ ಸಂಗತಿಯೆಂದರೆ ಇದೆಲ್ಲವೂ ನಡೆದುದು ಸುಧಾರಣೆಯ ಹೆಸರಿನಲ್ಲಿ! ಹಿಂದಕ್ಕೆ ಈ ಶತಮಾನದ ಆದಿಯಲ್ಲಿ ನ ಮ್ಮಲ್ಲಿ ಇನ್ನೂ ಸುಧಾರಣೆಯೂಗಿದ್ದಿಲ್ಲ, ಆ ಪರೆ ನೀತಿಯು ಮಟ್ಟ ಮಾತ್ರ ಖಂಡಿತವಾ ಗಿ ಬಹಳಷ್ಟು ಮೇಲ್ಮಟ್ಟದಲ್ಲಿತ್ತು. ಆದ ರೆ ಸಮಾಜ ಸುಧಾರಣೆಯು ಹೆಚ್ಚೆಚ್ಚು ಅ ಗುತ್ತ ನಡೆದಂತೆ ನೀತಿಮಾತ್ರ ಮಾತ್ರ ಹೆ ಚ್ಚೆಚ್ಚು ಕೆಳಕ್ಕಿಳಿಯುತ್ತಿತ್ತು, ಸಾಮಾಜಿಕ ಸುಧಾರಣೆಯೆಂದರೆ ಬಾಹ್ಯಾಡಂಬರ, ವಂ ಚನೆಗಾಗಿ ಹಾಕುವ ಸೋಗು ಎಂದೆನ್ನುವ ಪರಿಸ್ಥಿತಿ ಬಂದೊದಗಿದೆ.

ದೇಶದಲ್ಲಿಯ ಆರ್ಥಿಕ ದುಸ್ಥಿತಿಯು ಈ ಶೋಚನೀಯ ನೈತಿಕ ಅವನತಿಗೆ ಕಾರಣವಾಗಿದೆಯೆಂದು ಹಲವರು ಅಭಿಪ್ರಾಯಪಡುವದು. ಆದರೆ ಹಿಂದಿನಕ್ಕಿಂತಲೂ ಇಂದು ಜನಸಾ ಮಾನ್ಯರ ಆರ್ಥಿಕ ಸ್ಥಿತಿಯಲ್ಲಿ ಯಷ್ಟಿಂಚಿ ತ್ತಾದರೂ ಸುಧಾರಣೆಯಾಗಿದೆ. ಶಿಕ್ಷಣ ಕ್ಷೇತ್ರದಲ್ಲಿಯೂ ಪ್ರಗತಿಯಾಗಿದೆ. ಇಷ್ಟೇ ಅಲ್ಲದೆ, ಅಂದು ಆರ್ಥಿಕ ದೃಷ್ಟಿಯಿಂ ದ ತೀರ ಹೀನಸ್ಥಿತಿಯಲ್ಲಿದ್ದವನು ಕೂಡ ಪಾಪದ ಕೆಲಸಕ್ಕೆ, ಅನ್ಯಾಯ, ಅಪ್ರಾಮಾ ಣಿಕತನ, ಅಪನಂಬಿಕೆಗಳಿಗೆ ಹೇಸುತ್ತಿದ್ದ. ಆದರೆ ಈಗ ಎಲ್ಲವೂ ವಿಪರೀತ!

ಇಂದಿನ ಪರಿಸ್ಥಿತಿಯನ್ನೇ ವಿಚಾರಿ ಸೋಣ. ಸಾವಿರಗಟ್ಟಿ ಸಂಬಳ, ಉಚ್ಚ ಅಧಿಕಾರ, ಸಮಾಜದಲ್ಲಿ ಅತ್ಯುನ್ನತವಾದ ಮನ್ನಣೆಯ ಸ್ಥಾನ ಇವೆಲ್ಲವೂ ಇದ್ದರೂ ಅ ಧಿಕಾರಗಳೆಲ್ಲಿ ಅನೇಕರು ಲಂಚಬಡಕರಾ ಗುವದೇಕೆ? ಮೊನ್ನೆ ಮೊನ್ನಿನ ವರೆಗೆ ಮ ಹಾತ್ಯಾಗಿಗಳು, ಸತ್ಯಸಂಧರು, ನಿಷ್ಕಾಮಿ ಗಳು ಎಂದು ಖ್ಯಾತರಾದವರು ಇಂದು ಕೈಗೆ ಬಂದ ಅಲ್ಪ ಸ್ವಲ್ಪ ಅಧಿಕಾರ ಬಲ ದಿಂದ ಸಿಕ್ಕ ಮಾರ್ಗದಿಂದ ಹಣಗಳಿಸಲು ಹವಣಿಸುತ್ತಿರುವದೇಕೆ? ದೊಡ್ಡ ಅಧಿಕಾ ರಿಗಳು ಸಾವಿರ ಗಟ್ಟಲೆ, ಲಕ್ಷಗಟ್ಟಲೆ ಲಂಚ ಹೊಡೆಯುವದನ್ನು ನೋಡಿ ಚಿಕ್ಕ ಪುಟ್ಟ ನೌಕರ ವರ್ಗವು ಯಥಾಶಕ್ತಿ ಹತ್ತು, ಐ ವತ್ತು, ನೂರು ರೂಪಾಯಿಗಳ ಲಂಚ ಹೊಡೆಯುವದೇನೂ ಆಶ್ಚರ್ಯವಲ್ಲ.

ಇಂದು ಲಂಚಬಡಕತನವೆಂದರೆ ಅ ದೊಂದು ನೌಕರ ವರ್ಗದಲ್ಲಿ ಸಾಮಾನ್ಯ ವಾಗಿ ಕಂಡುಬರುವ ಸ್ವಭಾವ ವೈಗುಣ್ಯ ವೆಂದು ದುರ್ಲಕ್ಷಿಸಲ್ಪಡುತ್ತಿದೆ. ಆದರ ಅತಿರೇಕವಾದಾಗ, ಅಲ್ಲೊಂದು ಇಲ್ಲೊಂ ದು ಕಡೆ ಲಂಚಬಡಕರನ್ನು ಹಿಡಿದು ದಂ ಡಿಸಲಾಗುತ್ತಿದೆ. ಆದರೆ ಇಷ್ಟರಿಂದಲೇ ಈ ಮಹಾರೋಗವು ಮೂಯುವಾದೀತೆಂ ದು ಅನಿಸುವದಿಲ್ಲ. ಯಾಕೆಂದರೆ ಲಂಚ ಬಡಕತನವು ಸಣ್ಣ ಪುಟ್ಟ ದುರ್ಗುಣವಲ್ಲ. ಅನೇಕ ದುರ್ಗುಣಗಳ ಸಮುಚ್ಚಯವೆಂದರೆ, ಲಂಚಬಡಕತನ.

ತಾನು ದುಡಿಯುತ್ತಿರುವ ಸಂಸ್ಥೆಯ ಸೇವೆಯನ್ನು, ಯಥಾಶಕ್ತಿ ನಿಷ್ಠೆಯಿಂದ ಮಾಡಬೇಕೆಂದು ನೌಕರನಿಗೆ, ಅವನು ಅ ಲ್ಪವೇತನದ ಕಾರಕೂನನೇ ಇರಲಿ, ಹೆಡಿ ಗೆ ಶಂಬಳದ ಉಚ್ಚ ಅಧಿಕಾರಿಯೇ ಇರ ಲಿ, ಅವನಿಗೆ ಅವನನ್ನು ಹುಡಿಸಿಕೊಳ್ಳುವ ಸಂಸ್ಥೆಯಾಗಲೀ ಸರಕಾರವಾಗಲೀ ವೇತ ನ ಕೊಡುತ್ತಿದೆ. ಆದರೆ ಆ ನೌಕರನು ಅಥವಾ ಅಧಿಕಾರಿಯು ತನಗೊಪ್ಪಿಸಿದ ಕೆ ಲಸದಲ್ಲಿ ಇನ್ನೊಬ್ಬನಿಗೆ ಯಾವುದೊಂದು ಕೃಪೆತೋರಿ ಅದಕ್ಕೆ ಪ್ರತಿಫಲವನ್ನು ತೆಗೆ ದುಕೊಳ್ಳುವದು ಅಧಿಕಾರದ ದುರುಪ ಯೋಗವಾಗುವದು. ವಿಶ್ವಾಸಘಾತ ಮಾಡಿದಂತಾಗುವದು. ತಾನು ಹೊಂದಿ ಗೊಂಡಿರುವ ಸಂಸ್ಥೆಗೆ ದ್ರೋಹಬಗೆದಂತಾ ಗುವದು. ತನ್ನ ವರಿಷ್ಠರನ್ನು ವಂಚಿಸಿ ದಂತಾಗುವದು.

ಲಂಚವನ್ನು ಅದು ಹತ್ತೇ ರೂಪಾ ಯಿ ಇರಲಿ, ಲಕ್ಷ ರೂಪಾಯಿ ಇರಲಿ, ಹಣದ ರೂಪದಲ್ಲಿರಲಿ, ಸಾಧನ ಸಾಮ ಗ್ರಿಗಳ ರೂಪದಲ್ಲಿರಲಿ, ಸ್ವೀಕರಿಸುವದೂ ಘೋರ ಅಪರಾಧವನ್ನೆಸಗಿದಂತೆಂಬುದು ಅನೇಕರಿಗೆ ತಿಳಿದಿಲ್ಲ ಅಂದರೆ ಇಂದು ಹಣದ ಮೌಲ್ಯವೇರಿದೆಯಲ್ಲವೆ, ನೀತಿ ನ್ಯಾಯಗಳ ಬೆಲೆ ಅದಕ್ಕೂ ಹೆಚ್ಚಿನ ಪ್ರಮಾಣದಲ್ಲಿ ಕಳಗಿಳಿದಿದೆ. ಅಥವಾ ಹಣ ವೊಂದಿದ್ದರೆ ಸಾಕು, ಗುಣಗಳ ಅವಶ್ಯಕತೆ ಇಲ್ಲವೆಂದು ಎಲ್ಲರೂ ಅನ್ನುವಂತಾಗಿದೆ.

ದುರ್ದೈವದ ಸಂಗತಿಯೆಂದರೆ, ಇಂಥ ಅಘೋರ ಅಪರಾಧಗಳನ್ನೆಸಗುತ್ತಿರುವ ಸಮಾಜವಿದ್ರೋಹಿಗಳಿಗೆ ಸಮಾಜದಲ್ಲಿ ಎ ಲ್ಲಿಲ್ಲದ ಮಾನಮರ್ಯಾದೆ ದೊರಕುತ್ತಿದೆ! ಅದಕ್ಕೆ ಕಾರಣವೆಂದರೆ ಕಾನ ಹೊಡೆಯುವ ಲಂಚದಲ್ಲಿಯೂ ಒಂದೆರಡು ತೃಣ ಕಣ ಗಳನ್ನು ಯಾವದೊಂದು ಸಾರ್ವಜನಿಕ ಸಂ ಸ್ಥೆಗೋ ನಿಧಿಗೋ ಲಂಚಬಡಕನು ಕೊ ಡುವದರಿಂದ ಅವನು ಮಾಡಿದ ಪಾಪವೆ ಲ್ಲ ಮಾಯ್ಚಿ ಹೋಗಿ ಅವನಿಗೆ ಎಲ್ಲಿಲ್ಲದ ಗೌರವ ದೊರಕುತ್ತದೆ. ಮತ್ತು ಬಾನಿ, ಕೊಡುಗೈದೊರೆ, ಉದಾರ ಹೃದಯಿ ಎಂ ಬ ಸ್ತುತಿಸ್ತೋತ್ರಕ್ಕಾರ್ಹವಾಗುತ್ತದೆ.

ಹೀಗೆ ಈ ಸಮಾಜವಿದ್ರೋಹಿಯು ಉಧೋ ಉಧೋ ನಡೆಯುವದನ್ನು ನೋ ಡಿ ಇತರರೂ ಅದರ ಅನುಕರಣ ಮಾ ಡುತ್ತಾರೆ. ಈ ರೀತಿಯಾಗಿ ಇಂದು ನ ಮ್ಮ ಸಾಮಾಜಿಕ ಜೀವನವು ಈ ಮಟ್ಟಕ್ಕೆ ಬಂದು ನಿಂತಿದೆ. ಈ ದುಸ್ಥಿತಿ ಹೀಗೇ ಸಾಗಿದರೆ ನಮ್ಮ ಸಮಾಜ ಪುರುಷನ ಗತಿ ಏನು? ಸಮಾಜ ಪುರುಷನದೂ ಈ ಸ್ಥಿತಿ ಯೊದರೆ ರಾಷ್ಟ್ರಪುರುಷನ ಗತಿ?

ಮೊನ್ನಿನ ವರೆಗೆ ನಮ್ಮ ದುಸ್ಥಿತಿಗಾಗಿ ನಾವು ನಮ್ಮ ಮೇಲೆ ಆಡಳಿತ ನಡೆಸಿದ್ದ ಪರಕೀಯರನ್ನು ಹಳಿಯುತ್ತಿದ್ದೆವು. ಆದರೆ ಈಗ ನಾವು ಸ್ವತಂತ್ರರಾಗಿರುವೆವಾದರೂ ಈ ದುಸ್ಥಿತಿ ಪರ್ಯವಸಾನಗೊಂಡಿದೆಯಲ್ಲ? ನಮ್ಮ ದೇಶದ ದುಸ್ಥಿತಿ ದೂರಾಗಿ ಭಾರತವು ಸಕಲೈಶ್ವರ್ಯ ಸಮೃದ್ಧವಾಗಬೇಕೆಂದು ನಮ್ಮ ಸರಕಾರವು ಅನೇಕಾನೇಕ ಪ್ರಗತಿಯ ಯೋಜನೆಗಳನ್ನು ಕಾರ್ಯರೂಪಕ್ಕಿಳಿಸಿದೆ. ಆದರೆ ಸಮಾಜಪುರುಷನಲ್ಲಿ ಆಳವಾಗಿ ಬೇರೂರಿರುವ ಈ ದುರ್ಗುಣಗಳ ಉಚ್ಚಾಟನವಾಗುವ ವರೆಗೆ ಯಾವ ಯೋಜನೆಗಳಿಂದ ಏನ ಫಲ ದೊರೆತೀತು?

ಬಿತ್ತುವೆ ಭೂಮಿಯಲ್ಲಿ ಕರಕ್ಕೆ, ಕಣಿಗಲು ಆಳದ್ದ ಬೇರು ಬಿಟ್ಟಾಗ ಎಷ್ಟವು ಬಿದ್ದರೇನು? ಎಷ್ಟು ಗೊಬ್ಬರ ಹಾಕಿದರೇನು? ಎಷ್ಟು ದುಡಿದರೇನು? ಬೆಳೆ ಹೇಗೆ ಬಂದೀತು? ಸಮಾಜಪುರುಷನ ರೋಮ ರೋಮಗಳಲ್ಲಿ ಮೇಲೆ ಹೇಳಿದ ಮಹಾರೋಗಗಳು ಬೇರು ಬಿಟ್ಟಿರುವಾಗ ಅವನು ಬಲಶಾಲಿಯಾಗಬೇಕೆಂದು ಎಷ್ಟೇ ಪೌಷ್ಟಿಕ ಆಹಾರವನ್ನು ಕೊಡಲಿ, ಎಷ್ಟೇ ಪೌಷ್ಟಿಕ ಔಷಧಿಗಳನ್ನು ಕೊಡಲಿ, ಆದ ರಿಂದೇನಾದೀತು? ಪೊದಲು ಬೇನೆಯ ನಿವಾರಣೆಯಾಗಬೇಕು. ಪ್ರಕೃತಿ ಸಿದ್ಧ ನಿಯಮವಿದೆ. ಅನಂತರ ಸಿದ್ಧನವಾಗಿ ಪೌಷ್ಟಿಕ ಔಷಧಿ, ಪೌಷ್ಟಿಕ ಆಹಾರಾದಿಗಳು ಪಯೋಗವಾದೀತು.

ಆದರೆ ರಾಷ್ಟ್ರಾಭ್ಯುದಯದ ಅನೇಕಾ ನೇಕ ಯೋಜನೆಗಳನ್ನು ಸಿದ್ಧಪಡಿಸಿ, ಅ ವುಗಳನ್ನು ಕಾರ್ಯರೂಪಕ್ಕೆ ತರುವಲ್ಲಿ ನಿ ಗ್ಧರಾಗಿರುವ ನಮ್ಮ ಕಾರ್ಯಕರ್ತರು ಈ ವಿಷ ಯವನ್ನು ಕೂಲಂಕಷವಾಗಿ ಪರಿಶೀಲಿಸಿ ಗಮನ ಕೊಟ್ಟಂತೆ ತೋರುವದಿಲ್ಲ. ಒಂದೊಮ್ಮೆ ಅವರು ಇತ್ತ ಆಸ್ಥೆಯಿಂದ ಗಮನಿಸುತ್ತಿದ್ದರೆ ಸಮಾಜದಲ್ಲಿಯೂ ಸರಕಾರದಲ್ಲಿಯೂ ಬೇರೂರಿರುವ ಅನೇಕಾನೇಕ ದುರ್ವ್ಯಾಪಾರಗಳನ್ನು, ದುರ್ಗುಣಗಳನ್ನು ನಿರ್ಮೂಲನಮಾಡುವ ಕಾರ್ಯಕ್ಕಾಗಿ ಆದರು ಕಟ್ಟುಬದ್ಧರಾಗುತ್ತಿದ್ದರು.

ಈಗ್ಯೂ ಕಡವಾಗಿಲ್ಲ. ಈಗಲಾದರೂ ಮೇಲಿನ ಜನತೆಯು ನೈತಿಕ ಮಟ್ಟವು ಏರುವಂತೆ ಮೊಟ್ಟ ಮೊದಲು ನಮ್ಮ ಸಾಮಾಜಿಕ ವರ್ಗವು ಯತ್ನಿಸಲಿ. ಅಲ್ಲದೆ, ಈಗಿನ ಸ್ಥಿತಿಯಲ್ಲಿ ಇದ್ದಕ್ಕಿದ್ದಂತೆ ಉ ಳಿದರೆ ಸರಕಾರವು ಎಷ್ಟು ಬೇಕಾದಷ್ಟು ಯತ್ನಿಸಿದರೂ ಎಷ್ಟೇ ಸಾವಿರ ಕೋಟಿ ರೂಪಾಯಿಗಳನ್ನು ಆರ್ಥಿಕ ವೃದ್ಧಿ ಯೋಜನೆ ಗಳಿಗಾಗಿ ಹೆಚ್ಚಳಮಾಡಿದರೂ ಇದರಿಂದ ದೊರೆಯಬೇಕಾದ ಪ್ರತಿಫಲವು ದೊರೆಯಲಾರದು.

ಮೊದಲು ಕಾರ್ಯಪ್ರೇತ್ಸವು ನಿರ್ಮಲವಾಗಲಿ. ಕಾರ್ಯಕರ್ತರು ಪರಿಶುದ್ಧರಾಗಲಿ. ಆಗ ಮಾತ್ರ ಕೈಕೊಂಡ ಕಾರ್ಯದಲ್ಲಿ ಯಶ ದೊರೆತೀತು.

'ಜಯಹಿಂದ್.'

———

ರೋಗಿಗಳಿಗೆ ಸುವರ್ಣ ಭೂಮಿ! ಗುಣ ಹೊಂದಿ !!

THE ASIATIC PHARMACY.

(AYURVEDIC DISPENSARY)

SCHOOL ROAD, MERCARA.

(Near Cauvery Mahal Theatre)

ಏ ಷ್ಯಾ ಟಿ ಕ್ ಫಾ ರ್ಮ ಸಿ.

(ಆಯುರ್ವೇದ ವೈದ್ಯಶಾಲೆ)

(ಸ್ಕೂಲ್ ರೋಡು, ಮಡಿಕೇರಿ)

(ಕಾವೇರಿ ಮಹಲ್ ಥಿಯೇಟರಿನ ಬಳಿ)

ಮೇಲಿನ ವಿಳಾಸದಲ್ಲಿ ತಾ|| 28-8-1952 ರಿಂದ ತೆರೆಯಲ್ಪಟ್ಟಿರುವ ಆಯುರ್ವೇದ ವೈದ್ಯಶಾಲೆಯಲ್ಲಿ ಎಲ್ಲಾ ರೀತಿಯ ಶಾಸ್ತ್ರೀಯ ಔಷಧಗಳು ದೊರೆಯುತ್ತವೆ. ವೈದ್ಯರು ಎಲ್ಲರನ್ನೂ ಪರೀಕ್ಷಿಸಿ, ಉತ್ತಮ ತರಹದ ಚಿಕಿತ್ಸೆಯನ್ನು ಮಾಡುತ್ತಾರೆ. ಮಹನೀಯ ರೋಗಿಗಳು ನನಗೆ ತಕ್ಕ ಪ್ರೋತ್ಸಾಹವನ್ನು ಕೊಡಬೇಕಾಗಿ ವಿನಂತಿ.

4-3

ಕೆ. ಪಿ. ಬಾಲಕೃಷ್ಣನ್,
ಆಯುರ್ವೇದ ವೈದ್ಯರು.

ಕೊ ಡ ಗು

ತಾ. ೧೯-೯-೧೯೫೨ನೇ ಶುಕ್ರವಾರ

ಇಂದೋರಿನ ತೀರ್ಮಾನಗಳು.

ಅಖಿಲ ಭಾರತ ಕಾಂಗ್ರೆಸು ಸಮಿತಿಯ ಅಧಿವೇಶನವು ಈ ತಾ. ೧೩ ಮತ್ತು ೧೪ ರಲ್ಲಿ ಇಂದೋರಿನಲ್ಲಿ ಜರುಗಿತು. ಕಾಂಗ್ರೆಸಿನೊಳಗೆ ಉಂಟಾಗಬಹುದೆಂದು ತೋರಿದ್ದ ಒಡಕಿನ ಬೀತಿಯನ್ನು ನಿವಾರಿಸಿದಂತ ಕೀರ್ತಿಯು ಈ ಸಭೆಗೆ ಸಲ್ಲುತ್ತದೆ. ಕೇಂದ್ರ ಪಾರ್ಲಿಮೆಂಟಿನ ಮತ್ತು ಪ್ರಾಂತೀಕ ನ್ಯಾಯವಿಧಾಯಕ ಸಭೆಗಳ ಕಾಂಗ್ರೆಸು ಮೆಂಬರುಗಳಿಗೆ ಸರ್ಕಾರದಲ್ಲಿ ಹೆಚ್ಚಿನ ಅಧಿಕಾರವಿರಬೇಕೆಂದು ಒಂದು ಪಕ್ಷವೂ, ಕಾಂಗ್ರೆಸು ವರ್ಕಿಂಗ್ ಕಮಿಟಿ ಮತ್ತು ಪ್ರಾಂತೀಕ ಕಾಂಗ್ರೆಸು ಸಮಿತಿಗಳ ಮೆಂಬರುಗಳಿಗೆ ಹೆಚ್ಚಿನ ಅಧಿಕಾರವಿರಬೇಕೆಂದು ಇನ್ನೊಂದು ಪಕ್ಷವೂ ಈ ಅಧಿವೇಶನಕ್ಕೆ ಮೊದಲು ತೀವ್ರವಾದ ಚಳವಳಿಯನ್ನು ನಡಿಸುತ್ತಿದ್ದವು. ಈ ಎರಡು ಭಿನ್ನಾಭಿಪ್ರಾಯಗಳಿಂದ ಕಾಂಗ್ರೆಸು ಸಂಸ್ಥೆಯ ಒಗ್ಗಟ್ಟು, ಶಕ್ತಿಯೂ ಕುಂದುವದೆಂಬ ಭೀತಿಯು ತಲೆದೋರಿತ್ತು. ಆದರೆ ಕಾಂಗ್ರೆಸಿನ ಅಧ್ಯಕ್ಷರಾದ ಪಂಡಿತ ನೆಹರುರವರ ಜಾಣತನದಿಂದ ಈ ಸಮಸ್ಯೆಯು ಎಲ್ಲರಿಗೂ ಒಪ್ಪುವಂತೆ ಬಗೆಹರಿಸಲ್ಪಟ್ಟಿದ್ದು ಸಂತೋಷಕರ. ಪಾರ್ಲಿಮೆಂಟಿನ ಮತ್ತು ಪ್ರಾಂತೀಕ ಎಸೆಂಬ್ಲಿಗಳ ಸದಸ್ಯರುಗಳು ಆಯಾಯ ಪ್ರಾಂತೀಕ ಮತ್ತು ಜಿಲ್ಲಾ ಕಾಂಗ್ರೆಸು ಸಮಿತಿಗಳ 'ಎಕ್ಸೋಸಿಯೇಟ್' ಮೆಂಬರುಗಳಾಗಬೇಕು; ಆದರೆ ಅವರಿಗೆ ಅಲ್ಲಿ ಓಟು ನೀಡುವ ಹಕ್ಕಿಲ್ಲವೆಂದು ಮಾಡಿದ ತೀರ್ಮಾನದಿಂದ ಕಾಂಗ್ರೆಸು ಸಮಿತಿಯ ಮೆಂಬರುಗಳಿಗೂ ನ್ಯಾಯವಿಧಾಯಕ ಸಭೆಗಳ ಸದಸ್ಯರುಗಳಿಗೂ ತಮ್ಮ ಅಭಿಪ್ರಾಯಗಳನ್ನು ಪರಸ್ಪರ ತಿಳಿಸಲಿಕ್ಕೂ ಮತ್ತು ಉಭಯರು ಕಡೆಯವರಿಗೆ ಒಪ್ಪುವಂಥ ಆಡಳಿತ ನಡಿಸಲಿಕ್ಕೂ ಅನುಕೂಲವಾಗುವುದು. ಇದೇ ಈ ಅಧಿವೇಶನದ ಮುಖ್ಯ ತೀರ್ಮಾನವಾಗಿದೆ.

ದೇಶದ ಆರ್ಥಿಕ ಅಭಿವೃದ್ಧಿಯು ಸೊತ್ತುವಳಿ ಮೇರೆ ಸರ್ಕಾರವು ಯಾವ ಯೋಜನೆಯನ್ನೇ ಕೈಕೊಳ್ಳಲಿ, ಅದಕ್ಕೆ ಜನತೆಯ ಪೂರ್ಣ ಸಹಕಾರ ಮತ್ತು ಬೆಂಬಲವಿಲ್ಲದಿದ್ದರೆ ಅದು ಸಫಲವಾಗಲಾರದೆಂಬುದು ಸಹಜ. ಆದುದರಿಂದಲೇ ಕಾಂಗ್ರೆಸಿನ ಅನೇಕರು-ಪ್ರತಿಯೊಬ್ಬ ಪುರುಷನೂ, ಸ್ತ್ರೀಯೂ ದೇಶದ ಆರ್ಥಿಕ ಅಭಿವೃದ್ಧಿಗಾಗಿ ತಾವಾಗಿಯೇ ದುಡಿಯಬೇಕು, ತಮ್ಮ ಪಾಲಿನ ಕರ್ತವ್ಯವನ್ನು ಮಾಡಬೇಕೆಂದು ಕೋರಿಕೊಂಡಿರುವರು. ಇಂದು ಸಮೂಹದಲ್ಲಿರುವ ದೊಡ್ಡ ತಾರತಮ್ಯಗಳನ್ನು ಹೋಗಲಾಡಿಸಲು ಕೈಕೊಳ್ಳುವ ಯೋಜನೆಗಳು ನೆರವೇರಬೇಕಾದರೆ ಗ್ರಾಮವಾಸಿಗಳಲ್ಲಿ ಈ ಕಾರ್ಯದ ಬಗ್ಗೆ ಉತ್ಸಾಹ ಉಂಟಾಗುವಂತೆ ಮಾಡಬೇಕಾಗಿದೆ, ಇದು ಸುಲಭ ಸಾಧ್ಯದ ವಿಷಯವಲ್ಲ. ಇದಕ್ಕಾಗಿ ತ್ಯಾಗಬುದ್ಧಿ, ಸೇವಾವೃತ್ತಿ, ದೇಶಭಕ್ತಿ—ಇವೆಲ್ಲವೂ ಒಂದುಗೂಡಿ ಮುನ್ನಡೆಯಬೇಕಾಗಿದೆ.

ಸಗದೇಶೀ ಧ್ಯೇಯ ಮತ್ತು ದಕ್ಷಿಣ ಆಫ್ರಿಕದ ವರ್ಣಭೇದದ ಸಂಬಂಧ ಮಾಡಿದ ತೀರ್ಮಾನಗಳೂ ಮಹತ್ವದಾಗಿವೆ. ಪಾಶ್ಚಿಮಾತ್ಯ ದೇಶಗಳು ಯುದ್ಧದ ಸನ್ನಾಹಗಳನ್ನು ಮಾಡುತ್ತಿರುವ ಈ ಕಾಲದಲ್ಲಿ ಸ್ವಾತಂತ್ರ್ಯ ಭಾರತವು ತನ್ನ ವೈಶಿಷ್ಟ್ಯವನ್ನು ಬೀಗಬೇಕಾಗಿದೆ. ಮಹಾತ್ಮಾಜಿಯವರ ಗುರಿಯಾಗಿದ್ದ ಜಾಗತಿಕ ಶಾಂತಿಯನ್ನು ಸಾಧಿಸಲು ಹಿಂದೂದೇಶವು ಸತತ ಯತ್ನಿಸಬೇಕಾಗಿದೆ. ಯಾರ ಬಲಾತ್ಕಾರಕ್ಕೂ ಬಗ್ಗದೆತನ್ನನ್ಯಾಯಶೀಲತೆಯ ವರ್ತನೆಯಿಂದ ಯುದ್ಧವಾಗಲು ಅವಕಾಶ ಕೊಡದೆ, ಅಹಿಂಸಾ ರೀತಿಯಿಂದಲೇ ಸರ್ವ ಕಲಹ ಕಷ್ಟಗಳನ್ನು ತೀರ್ಮಾನಿಸುವಂತೆ ಎಲ್ಲಾ ಜನಾಂಗಗಳನ್ನು ಪ್ರೇರೇಪಿಸುವುದೇ ಭಾರತದ ಧ್ಯೇಯವಾಗಬೇಕು. ಇಂದು ದಕ್ಷಿಣ ಆಫ್ರಿಕದಲ್ಲಿ ಹಿಂದೀಯರೇ ಮೊದಲಾದ ಬಣ್ಣವ ಜನರ ಮೇಲೆ ಹೊರಿಸಿರುವ ಅನ್ಯಾಯ ಖಾನೂನನ್ನು ರದ್ದು ಮಾಡಲು ಸಂಬಂಧಪಟ್ಟ ಜನರು ಕೈಕೊಂಡಿರುವ ಸತ್ಯಾಗ್ರಹ ಚಳವಳಕ್ಕೆ ಬೆಂಬಲ ಕೊಡುವ ತೀರ್ಮಾನ ಮಾಡಿದ್ದು ಯೋಗ್ಯವಾಗಿದೆ. ಈ ಚಳವಳವು ಅಲ್ಲಿ ಜಯಪ್ರದವಾಗಿ ನಡೆದದ್ದೇ ಆದರೆ ಪ್ರಪಂಚದ ಇತರ ಭಾಗಗಳಲ್ಲಿ ನಡೆಯುತ್ತಿರುವ ಈ ರೀತಿಯ ಅನ್ಯಾಯಗಳನ್ನು ಹಿಂಸೆಯನ್ನು ಅವಲಂಬಿಸದೇ ಪರಿಹರಿಸಬಹುದಾಗಿದೆ.

ಶ್ರೀ ಮಶ್ರುವಾಲರ ನಿಧನ

ಗಾಂಧೀಜಿಯವರ ಒಬ್ಬ ಪರಮ ಶಿಷ್ಯರೂ, ನಿಸ್ಸೀಮ ದೇಶಭಕ್ತರೂ 'ಹರಿಜನ' ಪತ್ರಿಕೆಯ ಯೋಗ್ಯ ಸಂಪಾದಕರೂ ಆಗಿದ್ದ ಶ್ರೀ ಕಿಶೋರಲಾಲ ಮಶ್ರುವಾಲರು ಈ ತಾ. ೯ರಲ್ಲಿ ಶಿವಾಧೀನರಾದರು. ಇವರಿಗೆ ೬೧ ವರ್ಷ ಪ್ರಾಯವಾಗಿದ್ದರೂ ಸ್ಫೂರ್ತಿ ಶಕ್ತಿಯಲ್ಲಿ ತರುಣರಾಗಿದ್ದರು. ಮಹಾತ್ಮಾಜಿಯವರ ಮರಣದ ನಂತರ ಅವರ ತತ್ವಗಳನ್ನು ನಡೆ ನುಡಿಗಳಲ್ಲಿ ಆಚರಿಸುತ್ತಿದ್ದ ಹಲಕೆಲವರು ಕಣ್ಮರೆಯಾಗುತ್ತಿರುವುದು ಭಾರತದ ದುರ್ದೈವ. ಈ ಖ ವಾರ್ತೆಯನ್ನು ಕೇಳಿ ವಿನೋಬಾರವರು ಕೆಲವು ಸಮಯ ಮೂಕರಂತಾದ ಮೇಲೆ ಗಾಂಧೀವಾದಕ್ಕೂ ಹಾಗೂ ಭಾರತಕ್ಕೂ ಇವರ ಮರಣದಿಂದ ಉಂಟಾದ ನಷ್ಟವನ್ನು ಅಷ್ಟಿಷ್ಟೆಂದು ಹೇಳಲು ಸಾಧ್ಯವಿಲ್ಲ.

ಗಾಂಧೀಜಿಯವರ ನಂತರ ಮಶ್ರುವಾಲರು 'ಹರಿಜನ' ಪತ್ರಿಕೆಯ ಮೂಲಕ ತಮ್ಮ ಲೇಖನಗಳಿಂದ ಗಾಂಧೀ ಅನುಯಾಯಿಗಳಿಗೆ ಅವರ ಮರಣವನ್ನೇ ಮರೆಯುವಂತೆ ಮಾಡಿದ್ದರು. ತಾರುಣ್ಯದಲ್ಲಿ ಗಾಂಧೀಜಿಯವರ ವರ್ಚಸ್ಸಿಗೆ ಒಳಗಾಗಿ ವಕೀಲಿ ವೃತ್ತಿಯನ್ನು ಬಿಟ್ಟು, ದೇಶಸೇವೆಯಲ್ಲೇ ತನ್ನ ೩೯ ವರ್ಷಗಳನ್ನು ಸವೆದರು. ತನ್ನ ಬರವಣಿಗೆಗಳಲ್ಲಿ ಸತ್ಯ ಮತ್ತು ನ್ಯಾಯವನ್ನು ಎಡೆಬಿಡದೆ ಸಾಧಿಸುತ್ತಾ ಪತ್ರಿಕಾ ಪ್ರಪಂಚದಲ್ಲಿ ಆದರ್ಶಪ್ರಾಯರಾಗಿದ್ದರು. ರಚನಾತ್ಮಕ ಕಾರ್ಯಗಳನ್ನು ಜನತೆಯ ಮುಂದೆ ಸ್ಫೂರ್ತಿದಾಯಕವಾಗಿಇಡುತ್ತಿದ್ದರು. ಕಾಂಗ್ರೆಸಿಗರು ಪೂರ್ಣ ಅಧಿಕಾರಕ್ಕೆ ಬಂದು ಪ್ರಜಾಪ್ರತಿನಿಧಿ ಸರಕಾರದ ಪರೀಕ್ಷೆ ನಡೆಸುತ್ತಿರುವ ಈ ಸಮಯದಲ್ಲಿ ವಿನೋಬಾರವರ ಭೂದಾನ ಯಜ್ಞದ ಈ ಕಾಲದಲ್ಲಿ ಇವರ ಸೇವೆಯು ಮತ್ತಷ್ಟೂ ಬೇಕಾಗಿತ್ತು. ಆದರೆ ವಿಧಿಯ ವಿಲಾಸವನ್ನು ತಡೆಯಲು ಸಾಧ್ಯವಿಲ್ಲ. ಇವರು ತನ್ನ ಅನೋಘವಾದ ಸೇವೆಯಿಂದ ತನ್ನ ಜನ್ಮವನ್ನು ಸಾರ್ಥಕ ಮಾಡಿಕೊಂಡರು. ಆದರೆ ಭಾರತವು ಈ ನಷ್ಟದಿಂದ ಬಡವಾಗಿದೆ ಎಂಬುದರಲ್ಲಿ ಸಂದೇಹವಿಲ್ಲ.

ವರ್ತಮಾನ.

ಚೀಫ್ ಕಮಿಷನರವರ ಆಫೀಸಿನಲ್ಲಿ ಮೇನೇಜರಾಗಿದ್ದ ಶ್ರೀ. ಎಂ ರಾಮಸ್ವಾಮಿಯವರು ಕಾರಣಾಂತರಗಳಿಂದ ಕೆಲಸದಿಂದ 'ಸಸ್ಪೆಂಡ್' ಮಾಡಲ್ಪಟ್ಟಿರುವರು.

ಇಡೀ ಹಿಂದೂಸ್ಥಾನದಲ್ಲಿ ಆಗುವಂತೆಯೇ ಕೊಡಗಿನಲ್ಲೂ ಸಮೂಹ ವಿಕಾಸವೆಂಬ ಜನತೆಯು ಮಹಾತ್ಮಾಜೀಯವರ ಜನ್ಮದಿನೋತ್ಸವದ ದಿನವಾದ ಅಕ್ಟೋಬರು ತಾ. ೨ರಲ್ಲಿ ಪ್ರಾರಂಭಿಸಲ್ಪಡುವದು.

ದಸರಾ ಹಬ್ಬವನ್ನು ಆಚರಿಸುವ ಸಾರಾಯಿ ರೇಶನ್ ಕಾರ್ಡುದಾರರು ಈ ತಾ. ೩೦ರೊಳಗೆ ಅರ್ಜಿ ಬರಕೊಂಡರೆ ಒಂದು ಕುಪ್ಪಿ ಸಾರಾಯಿ ಹೆಚ್ಚು ಕೊಡಲಾಗುವದೆಂದು ಪ್ರಕಟವಾಗಿದೆ.

ಕಳೆದ ಎಂಟ್ಹತ್ತು ದಿವಸಗಳಿಂದ ಮಳೆಯೇ ಇಲ್ಲದೆ ಬಿಸಿಲು ಜೋರಾಗಿ ಭತ್ತದ ಗದ್ದೆಗಳಲ್ಲಿ ನೀರು ಬತ್ತುತ್ತಾ ಬರುತ್ತಿದೆ; ಹಲವು ಒಣಗಿ ಹೋಗಿವೆ. ಗ್ರಾಮಸ್ಥರಲ್ಲಿ 'ಹಾಹಾಕಾರ' ವೆದ್ದಿದೆ ರೈತರೆಲ್ಲರೂ ಆಕಾಶದ ಕಡೆ ನೋಡುತ್ತಿರುವರು!!

ವೀರಾಜಪೇಟೆ ಶ್ರೀ ಕಾವೇರಿ ಆಶ್ರಮದಲ್ಲು ನವರಾತ್ರಿ ಉತ್ಸವವು ಈ ತಾ. ೧೯ರಿಂದ ೨೮ರ ವರೆಗೆ ಆಚರಿಸಲ್ಪಡುವದೆಂದೂ ಪ್ರತೀ ದಿನ ಸಾಯಂಕಾಲ ೭ರಿಂದ ೯ ಗಂಟೆವರೆಗೆ ಭಜನೆ, ಉಪನ್ಯಾಸ, ಹರಿಕಥೆ, ಭಾರತ ವಾಚನ, ಪೂಜೆ ಮೊದಲಾದವು ನಡೆಯುವವೆಂದೂ, ಸರ್ವರಿಗೂ ಆಮಂತ್ರಣ ವಿದೆಯೆಂದೂ ತಿಳಿಯಬರುತ್ತದೆ.

ಅನಿಶ್ಚಿತವಾದ ಆರೋಪಣೆಗಳನ್ನು ಸೂಚಿಸಿ ಪಸ್ಸತ್ತು ಇಲ್ಲದ ಅರ್ಜಿಗಳನ್ನು ಪಬ್ಲಿಕಿನವರು ಮಂತ್ರಿಗಳಿಗೆ ಕಳುಹಿಸುತ್ತಿರುವರೆಂದೂ ಇಂಥಾ ಅರ್ಜಿಗಳ ಮೇಲೆ ಯಾವ ಕಾರ್ಯಕ್ರಮವನ್ನು ತೆಗೆದುಕೊಳ್ಳಲಾಗುವುದಿಲ್ಲವೆಂದೂ, ಅರ್ಜಿದಾರರು ಪೂರ್ತಿ ಹೆಸರು, ವಿಳಾಸ ಮತ್ತು ನಿಶ್ಚಿತವಾದ ಪುಕಾರನ್ನು ಸೂಚಿಸಿ ಬರೆದರೆ ಅವುಗಳನ್ನು ವಿಚಾರಿಸಿತಕ್ಕ ಕ್ರಮತೆಗೆದುಕೊಳ್ಳಲಾಗುವದೆಂದೂ ಚೀಫ್ ಸೆಕ್ರೆಟರಿಯವರು ತಿಳಿಸುತ್ತಾರೆ.

ಗ್ರಾಜ್ಯುವೇಟರುಗಳು ಮತ್ತು ಸ್ಕೂಲ್ ಫೈನಲ್ ಪರೀಕ್ಷೆಯ 'ಎಲಿಮೆಂಟರಿ ಮೆತಮೆಟಿಕ್ಸ್'ನಲ್ಲಿ ೪೦% ಮಾರ್ಕ್ಸ್‌ತೆಗೆದವರು ಫೆಬ್ರವರಿ ಪೇಟೆಯಲ್ಲಿ ತಾ. ೧-೧೦-೫೨ರಿಂದ ೬ ತಿಂಗಳ ವರೆಗೆ ನಡೆಯುವ ಸರ್ವೇ ತರಬೇತಿಗೆ ಅರ್ಜಿಗಳನ್ನು ಈ ತಾ. ೨೫ರೊಳಗೆ ಅಸಿಸ್ಟೆಂಟ್ ಕಮಿಷನರಿಗೆ ತಲಪುವಂತೆ ಕಳುಹಿಸಬೇಕೆಂದೂ ಮತ್ತು ಅರ್ಜಿದಾರರು ತಾ. ೨೯ರಲ್ಲಿ ಅವರ ಮುಂದೆ ಹಾಜರಾಗಬೇಕೆಂದೂ, ಈ ತರಬೇತಿನಲ್ಲಿ ತೇರ್ಗಡೆಯಾದವರನ್ನು ಅಸಿಸ್ಟೆಂಟ್ ಪಾರುಪತ್ಯಗಾರರಾಗಿ ನೇಮಿಸಲಾಗುವುದೆಂದೂ ಪ್ರಕಟವಾಗಿದೆ.

ಕೊಡಗು ಸರಕಾರದಲ್ಲಿ ಗುಮಾಸ್ತರ (ಕ್ಲಾರ್ಕ್ಸ್) ಉದ್ಯೋಗಕ್ಕೆ ಉಮೇದುವಾರರನ್ನು ಚುನಾಯಿಸಲು ಇದೇ ತಾರೀಕು ೨೯-೯-೫೨ ರಲ್ಲಿ ಕೊಡಗು "ಸ್ಟಾಫ್ ಸಿಲೆಕ್ಷನ್ ಬೋರ್ಡ್" ವಿಂಟೆಂಗು ಮಡಿಕೇರಿಯಲ್ಲಿ ನಡೆಯುವುದು. ಎಸ್. ಎಸ್. ಎಲ್. ಸಿ. ಯೂ ಹೆಚ್ಚಿನ ಪರೀಕ್ಷೆಗಳಲ್ಲಿ ಉತ್ತೀರ್ಣರಾಗಿದ್ದು ಈ ವರೆಗೆ ತಮ್ಮ ಹೆಸರನ್ನು ರಿಜಿಸ್ಟರ್ ಮಾಡಿಸದೆ ಇರತಕ್ಕಂತವರು ಮತ್ತು ರಿಜಿಸ್ಟರ್ ಮಾಡಿಸಿ ಆದನ್ನು ಸಮಯಕ್ಕೆ ಸರಿಯಾಗಿ ಮುಂದುವರಿಸದೆ (ರಿನ್ಯೂ ಮಾಡದೆ) ಇರತಕ್ಕಂತವರು ಒಡನೇ ಮಡಿಕೇರಿ ಎಂಪ್ಲಾಯಿಮೆಂಟ್ ಆಫೀಸಿನಲ್ಲಿ ತಮ್ಮ ಹೆಸರನ್ನು ರಿಜಿಸ್ಟರ್ ಅಥವಾ ರಿನ್ಯೂ ಮಾಡಿಸಿಕೊಳ್ಳಬೇಕಾಗಿ ಈ ಮೂಲಕ ತಿಳಿಸಲಾಗಿದೆ.

ಕೊಡಗಿನ ಸಹಕಾರ ಚಳವಳಿದ ಬೆಳವಣಿಗೆಯನ್ನು ವಿಮರ್ಶಿಸಿ, ಮುಂದಿನ ಅಭಿವೃದ್ಧಿಗೆ ಸಲಹೆಗಳನ್ನು ಕೊಡಲು ಸರಕಾರವು ಈ ಕೆಳಗಿನ ಕಮಿಟಿಯನ್ನು ನೇಮಿಸಿದೆ. ರಿಸರ್ವ್ ಬ್ಯಾಂಕಿನ ನಿವೃತ್ತ ಡೆಪ್ಯುಟಿ ಗವರ್ನರರಾದ ಮೈಸೂರಿನ ಶ್ರೀ ಜಿ. ಎಂ. ಮೆಕ್ರೈಯವರು (ಅಧ್ಯಕ್ಷರು), ಶ್ರೀ ಗಳಾದೆ ಎನ್. ಸೋಮಣ್ಣನವರು, ಡಾ. ಪಿ ಎಂ. ಸಾಣಮ್ಮಯ್ಯನವರು ಮತ್ತು ಮನೆಯಪಂಡ ಎಂ. ಬೆಳ್ಯಪ್ಪನವರು ಮೆಂಬರುಗಳು, ಟ್ರೈಜರಿ ಆಫೀಸರಾದ ಶ್ರೀ ಶ್ರೀನಿವಾಸರಾವ್ ರವರು ಸೆಕ್ರೆಟರಿಯವರು. ಈ ಕಮಿಟಿಯ ಪ್ರಥಮ ವಿಂಟೆಂಗು ಈ ತಾ. ೧೫ರಲ್ಲಿ ಮಡಿಕೇರಿಯಲ್ಲಿ ನಡೆಯಿತು. ಇವರು ಒಂದು ಪ್ರಶ್ನಾವಳಿಯನ್ನು ತಯಾರಿಸಿ ಜನರ ಅಭಿಪ್ರಾಯ ತೆಗೆಯುವರೆಂದೂ, ಡಿಸೆಂಬರು ಅಂತ್ಯದೊಳಗೆ ಸರ್ಕಾರಕ್ಕೆ ವರದಿಯನ್ನು ಒಪ್ಪಿಸಬೇಕೆಂದೂ, ಒಂದು ತಿಂಗಳಲ್ಲಿ ಪುನಃ ಈ ಕಮಿಟಿ ವಿಂಟೆಂಗು ಸೇರುವದೆಂದೂ ತಿಳಿಯಬರುತ್ತದೆ.

Coorg Forest Department.

Timber Sale.

About 60,000 cft. of Teak, Rosewood, Honne and other hardwoods will be sold by auction at the Coorg Timber Depot, Hunsur, on Friday the 3rd October 1952 at 10 A. M.

For further particulars apply to the Conservator of Forests, Coorg, Mercara.

ಓದುಗರ ಓಲೆಗಳು

ವಯಸ್ಕರ ಶಿಕ್ಷಣ.

ನಮ್ಮ ಸ್ವತಂತ್ರ ಭಾರತವು ವಿದ್ಯೆಯಲ್ಲಿ ಈಗ ಮುಂದುವರಿಯುತ್ತಾ ಇದೆ. ಹಾಗೆಯೇ ನಮ್ಮ ಕೊಡಗು ದೇಶವು ವಿದ್ಯೆಯಲ್ಲಿ ಮುಂದುವರಿಯುವಂತೆ ಮಾಡಬೇಕಾಗಿದೆ. ಇಲ್ಲಿ ವಿದ್ಯೆಯನ್ನು ವಿಂಗಡಿಸುವರಿಲ್ಲ ವಯಸ್ಕರ ಶಿಕ್ಷಣವನ್ನು ಏರ್ಪಡಿಸಿರುವುದೇನೋ ನಿಜ. ಇದಕ್ಕಾಗಿ ಇಬ್ಬರು ಉಪಾಧ್ಯಾಯರುಗಳನ್ನು ತರಬೇತು ಮಾಡಿರುವರು. ಆದರೆ ಸರಕಾರವು ಇದಕ್ಕೆ ಹೆಚ್ಚಿನ ಗಮನ ಕೊಡುವಂತೆ ಕಾಣುವುದಿಲ್ಲ. ಉತ್ತರ ಕೊಡಗಿನಲ್ಲಿ ವಯಸ್ಕರ ಶಿಕ್ಷಣಕ್ಕೆ ಹೆಚ್ಚಿನ ಪ್ರೋತ್ಸಾಹವನ್ನು ಕೊಡುತ್ತಾ ಇದೆಯೆಂಬುದು ನಿಜ ಹಾಗೆ ದಕ್ಷಿಣ ಕೊಡಗಿನಲ್ಲಿಯೂ ವಯಸ್ಕರ ಶಿಕ್ಷಣ ಶಾಲೆಗಳನ್ನು ತೆರೆದು ಬಡ ಜನರನ್ನು ಉದ್ಧರಿಸಬೇಕೆಂದು ನನ್ನ ಪ್ರಾರ್ಥನೆ. ಇದಕ್ಕಾಗಿ ಕರೆತರಬೇಕಾಗಿ ಬಂದ ಅಧಿಕಾರಿಗಳನ್ನು ನೇಮಿಸಿ ಎಲ್ಲಾ ಅವಿದ್ಯಾರ್ಜಿತರನ್ನೂ ವಿದ್ಯಾವಂತರನ್ನಾಗಿ ಮಾಡುವರೇ? ಇನ್ನಾದರೂ ಅಧಿಕಾರಿಗಳು ಹೆಚ್ಚಿನ ಗಮನ ಕೊಡುವರೇ? ದಕ್ಷಿಣ ಕೊಡಗಿನ ಅವಿದ್ಯಾವಂತರನ್ನು ಉತ್ತರಕೊಡಗಿನಅವಿದ್ಯಾವಂತರಂತೆ ಮುಂದಕ್ಕೆ ತರಬೇಕಾಗಿ ಕೋರಿಕೆ.

ಕೆ. ಪಾಪು.

ಮಳೆಗಾಗಿ ಪ್ರಾರ್ಥನೆ.

ಕೊಡಗಿನ ಮಾನ್ಯ ಮುಖ್ಯ ಮಂತ್ರಿಯವರ ಅವಗಾನೆ-ನೀವು ವೈಯಕ್ತಿಕ ಆಕಾಶವಾಣಿಯಲ್ಲಿ ಕೊಡಗಿನ ೫ ವರ್ಷದ ಕಾರ್ಯ ಯೋಜನೆಯನ್ನು ಕುರಿತು ಭಾಷಣ ಮಾಡಿದನ್ನು ಪತ್ರಿಕೆಯಲ್ಲಿ ಓದಿ ನೋಡಿದೆನು. ತುಂಬಾ ಸಂತೋಷದ ವಿಷಯ. ಆದರೆ ಈ ಯೋಜನೆಯು ಎಲ್ಲಿಗೆ ತಲಪುತ್ತದೊ ಎಂಬುದನ್ನು ಜನರು ಐದು ವರ್ಷದ ವರೆಗೆ ಕಷ್ಟಸಹಲದಿಂದ ಕಾದು ನೋಡಬೇಕಾಗಿದೆ. ಅದೇ ದಿವಸ ಆಕಾಶವಾಣಿಯಲ್ಲಿ ಈಗಿನ ಬೆಳೆಗೆ ಮಳೆ ಇಲ್ಲ. ದೇಶದ ಅರ್ಧ ಭಾಗಕ್ಕೆ ನೀರಿಲ್ಲದೆ ಪಾಳು ಬಿದ್ದಿದೆ. ನೆಟ್ಟ ಭೂಮಿಯೂ ಸಹ ಮಳೆ ಇಲ್ಲದ ಕಾರಣ ಒಣಗುತ್ತಾ ಇರುವುದನ್ನು ನೋಡಿಕೊಂಡು ಜನರು ಆಕಾಶದ ಕಡೆಗೆ ನೋಡುತ್ತಾ ಇದ್ದಾರೆ. ಆದ್ದರಿಂದ ಕೊಡಗಿನ ಪ್ರತಿ ಜನಾಂಗವೂ ಅವರ ಅವರ ದೇವಸ್ಥಾನದಲ್ಲಿ ಇಂತಹ ದಿವಸ ಸೇರಿ ಪೂಜೆ ಮಾಡಿಸಬೇಕೆಂಬ ಮಾನ್ಯ ಮಂತ್ರಿಯವರು ಆಕಾಶವಾಣಿಯಲ್ಲಿ ಮೊತ್ತಾಡಿ ಪೂಜೆ ಮಾಡಿಸಿದಲ್ಲು ಈ ಮೇಲಿನ ಯೋಜನೆಗೆ ಎಷ್ಟೊ ದೊಡ್ಡ ಸಹಾಯವಾಗುತ್ತಿತ್ತು. ಅದರೂ ಕಾಲವಿಳಂಬವಾಗಲಿಲ್ಲ. ಇನ್ನಾದರೂ ಮಾನ್ಯ ಮಂತ್ರಿಯವರೂ ಚೀಫ್ ಕಮಿಷನರ್‌ರವರೂ ಸಹಸೇರಿ ಪ್ರತಿ ಜಾತಿಯವರ ದೇವಸ್ಥಾನದಲ್ಲೂ ಪೂಜೆ ನಡೆಸುವಂತೆ ವಿನಂತಿ ಮಾಡಿದಲ್ಲು ಖಂಡಿತವಾಗಿಯೂ ಮಳೆ ಬರುವುದೆಂದು ನನ್ನ ನಂಬಿಕೆಯಂತೆ ದೇಶದ ಜನರೆಲ್ಲರಿಗೂ ಸಹ ನಂಬಿಕೆ ಇರುವುದೆಂದು ನನ್ನ ಭಾವನೆಯಾಗಿದೆ. ಯಾವ ಯೋಜನೆಯೂ ಜಾರಿಯಾಗಬೇಕಾದರೆ ದೇವರ ದಯವೇ ಬೇಕಾಗಿರುವುದು. ಆದ್ದರಿಂದ ಇನ್ನಾದರೂ ದೇವಸ್ಥಾನದಲ್ಲಿ ಪೂಜೆಗೆ ವಿಳಂಬವಾಗದೆ ಪೂಜೆ ಮಾಡಿಸಬೇಕಾಗಿ ನನ್ನ ಆಶಯವಾಗಿದೆ. ಕಳೆದ ಎರಡನೆಯ ಮಹಾಯುದ್ಧದಲ್ಲೂ ಸಹ ಬ್ರಿಟಿಷರು ಅವರು ಆಳುತ್ತಿದ್ದ ದೇಶದ ಉದ್ದಗಲಕ್ಕೂ ಇರುವ ಎಲ್ಲಾ ದೇವಸ್ಥಾನಗಳಲ್ಲಿ ಸರಕಾರದ ಖರ್ಚಿನಿಂದ ೨-೩ ಸಲ ಪೂಜೆ ಮಾಡಿಸಿ ಜಯಗಳಿಸಿರುವ ಸಂಗತಿ ನಮ್ಮೆಲ್ಲರಿಗೂ ತಿಳಿದ ವಿಷಯವೇ ಆಗಿದೆ ಪೂರ್ವ ಕಾಲದಲ್ಲೂ ಸಹ ಅಗೋಷ್ಟ ತಿಂಗಳ ಹುನ್ನೈದು ಅಂದರೆ (ಕರ್ನಾಟಕದ ತಿಂಗಳ ಅಮೈರಿ ಬಿನಪೂಸ ನಂಗೈ) ಪ್ರತಿ ಕೊಡಿನವರು ಅವರವರ ದೇವಸ್ಥಾನಕ್ಕೆ (ಬೈಯೂಡು) ಎಂದರೆ ಪ್ರತಿ ಒಬ್ಬನೂ ಒಂದು ಪಡಿ ಅಕ್ಕಿ, ಒಂದು ತೆಂಗಿನಕಾಯಿ, ೨ ಚೂರು ಬೆಲ್ಲ ಮತ್ತು ಬಾಳೆಹಣ್ಣು ತೆಗೆದುಕೊಂಡು ಹೋಗಿ ಪೂಜೆ ಮಾಡಿಸುವ ಪದ್ಧತಿ ಇತ್ತು. ಆವಾಗ-ಮಳೆಯಿಂದ ದೇಶವು ಸುಭಿಕ್ಷವಾಗಿತ್ತು. ಈಗಿನ ನವನಾಗರಿಕತೆಯವರು ದೇವಸ್ಥಾನಕ್ಕೆ ಸೇರುವದೂ ಒಂದು ತರದ ಕೊರತೆಯೆಂದು ಭಾವಿಸುವರು. ದೇವರಿಲ್ಲವೆಂದೂ ದೇವರನ್ನು ನಂಬಿಕೆ ಕಾರಣ ದೇವರು ಸಹನಮ್ಮನ್ನು ಪರೀಕ್ಷಿಸುವನು. ಅಲ್ಲದೆ ಯಾವ ಭಾವಿಯಲ್ಲೂ ನೀರಿಲ್ಲ, ಗದ್ದೆಗಳೆಲ್ಲಾ ನೀರಿಲ್ಲದೆ ಒಣಗಿದೆ, ಆದ್ದರಿಂದ ಪ್ರತಿ ದೇವಸ್ಥಾನದಲ್ಲೂ ಮಳೆಯಾಗಬೇಕೆಂಬುದಾಗಿ ಪ್ರಾರ್ಥನೆ ನಡೆಸುವಂತೆ ಮಾನ್ಯ ಮಂತ್ರಿಯವರು ಮತ್ತು ಚೀಫ್ ಕಮಿಷನರ್‌ರವರನ್ನೂ ಏರ್ಪಾಡುಮಾಡಬೇಕೆಂದು ನಾನು ದೇಶದ ಪರವಾಗಿ ಅವರನ್ನು ಕೋರುತ್ತೇನೆ.

ಕೆ. ಐಯ್ಯಪ್ಪ.

ಜಗತ್ತಿನಲ್ಲಿ ಅಕ್ಕಿಯ ಕೊರತೆ ಹೆಚ್ಚುತ್ತಿದೆ.

ಜಗತ್ತಿನ ಜನಸಂಖ್ಯೆ ಹೆಚ್ಚುತ್ತಾ ನಡೆದಿರುವದರಿಂದಲೂ, ಉತ್ಪಾದನೆಯು ಸರಿಯಾಗಿ ನಡೆದಿಲ್ಲವಾದುದರಿಂದಲೂ ಅಕ್ಕಿಯ ಕೊರತೆಯು ಜಗತ್ತಿನಲ್ಲಿ ಭೀಕರವಾಗುತ್ತಿದೆಯೆಂದು ಕೇಂದ್ರದ ಆಹಾರ ಹಾಗೂ ವ್ಯವಸಾಯ ಖಾಖೆಯ ಸಹಾಯಕ ಉಪಮಂತ್ರಿ ಡಾ. ಪಂಜಾಬರಾವ್ ದೇಶಮುಖರು ತಾ. ೧೫ರಲ್ಲಿ ಕಟಕದಲ್ಲಿ ಸೇರಿದ ಅಂತರಾಷ್ಟ್ರೀಯ ಶರಬೇತಿ ಪರಿಷತ್ತಿನಲ್ಲಿ ಹೇಳಿದರು.

ಅಕ್ಕಿಯ ಕೊರತೆಯು ಈಗ ಭೀಕರವಾಗಿದೆ. ೧೯೫೦-೫೧ರಲ್ಲಿ ಅಕ್ಕಿ ಹುಟ್ಟುವಳಿಯು ೧೫ ಕೋಟಿ ೩೮ ಲಕ್ಷ ಟನ್ ಆಗಿದೆ. ೧೯೪೪-೪೫ರಲ್ಲಿಯದಕ್ಕಿಂತ ೪೫ ಲಕ್ಷ ಟನ್ ಕಡಿಮೆಯಾಗಿದೆ. ಆದರೆ ಜಗತ್ತಿನ ಜನ ಸಂಖ್ಯೆ ಹೆಚ್ಚುತ್ತಿರುವಾಗ ಅಕ್ಕಿ ಹುಟ್ಟುವಳಿ ಸ್ವಲ್ಪವಾದರೂ ಮಾತ್ರ ಕಡಿಮೆಯಾಗುತ್ತ ನಡೆದಿದೆ.

ಯುದ್ಧಪೂರ್ವದಲ್ಲಿಯ ಅವಧಿಯಲ್ಲಿ ೬೦ ಲಕ್ಷ ಟನ್ ಆಹಾರ ಉಳಿತಾಯವಾಗುತ್ತಿದ್ದರೆ ೧೯೫೧ರಲ್ಲಿ ೫೦ ಲಕ್ಷ ಟನ್ನಿಗೆ ಬಂದು ನಿಂತಿದೆ. ಆದರೆ ಗ್ರಾಹಕರು ತಮ್ಮ ಪಟ್ಟವನ್ನು ಮೊದಲಿನಂತೆ ಕಾಯ್ದುಕೊಳ್ಳುವದಕ್ಕೆ ಯತ್ನಿಸಿದ ಕಾರಣ ಅವರಿಗಾಗಿ ೯೦ ಲಕ್ಷ ಟನ್ ಅಕ್ಕಿ ಬೇಕಾಯಿತು. ಈ ಕಾರಣದಿಂದಾಗಿ ಅಕ್ಕಿಯ ಕೊರತೆಯು ಜಗತ್ತಿನಲ್ಲಿ ಸಹಿಸವಾಗಿದೆ. ಅಂತರಾಷ್ಟ್ರೀಯ ಕ್ರಮವಿಲ್ಲದೆ ಈ ಕೊರತೆಯನ್ನು ನೀಗುವ ಮಾರ್ಗವೇ ಉಳಿದಿಲ್ಲವೆಂಬುದು ಈಗ ಖಚಿತವಾಗಿ ತಿಳಿದಿದೆಯೆಂದು ಡಾ. ದೇಶಮುಖರು ಹೇಳಿದರು.

ವರ್ತಮಾನ ಪತ್ರ ಕಾಗದದ ನಿಯಂತ್ರಣ ಹೋಯಿತು.

ವರ್ತಮಾನ ಪತ್ರದ ಕಾಗದದ ಮೇಲಿನ ನಿಯಂತ್ರಣವನ್ನು ಭಾರತ ಸರಕಾರವು ತೆಗೆದುಹಾಕಿತು. ಆದರೆ ಇತ್ತೀಚೆಗೆ ಅದು ಬೇಕಾದಷ್ಟು ಹುಟ್ಟಿ ವಿತರಣೆಗೆ ಸಾಕಷ್ಟಾಗಿರುವುದರಿಂದ, ಆದರ ಮೇಲಿನ ನಿಯಂತ್ರಣವನ್ನು ತೆಗೆಯುವ ಬಗ್ಗೆ ವಿಚಾರ ನಡೆಸಿತ್ತು.

ಈ ಬಗ್ಗೆ ಕೊನೆಯ ನಿರ್ಣಯಕ್ಕೆ ಬಂದು ಈ ನಿಯಂತ್ರಣವನ್ನು ಇದೇ ತಿಂಗಳ ೧೯ನೇ ತಾರೀಕಿನಿಂದ ತೆಗೆಯಲಾಗಿದೆಯೆಂದು ಪ್ರಕಟಿಸಲಾಗಿದೆ.

ಮಲಬ್ ವಿರೋಧಕ ಅಂದೋಲನ.

ದಕ್ಷಿಣ ಆಫ್ರಿಕೆಯಲ್ಲಿ ಅಲ್ಲಿಯ ಮಲಬ್ ಸರಕಾರವು ನಡೆಸುತ್ತಿರುವ ವರ್ಣದ್ವೇಷೀಯ ಧೋರಣೆಯನ್ನು ಪ್ರತಿಭಟಿಸುತ್ತಿರುವ ಆಂದೋಲನದ ಕಾರಣದಿಂದ ಇದುವರೆಗೆ ೩೭೩೪ ಕರಿ ವರ್ಣದವರು ಬಂಧಿತರಾಗಿದ್ದಾರೆ. ಈ ಆಂದೋಲನವು ಕಳೆದ ಜೂನ್ ತಿಂಗಳಲ್ಲಿ ಪ್ರಾರಂಭವಾಗಿದೆ.

ಕಲಕತ್ತೆಯೆ ಕೃತ್ರಿಮ ಮಳೆ ಪ್ರಯೋಗ

ಭಾರತ ಸರಕಾರದ ವೇಧ ಶಾಲೆಯ ಮೂಜಿ ಸಂಚಾಲಕ ಡಾ. ಎಸ್. ಕೆ. ಬ್ಯಾನರ್ಜಿಯವರು ಕೃತ್ರಿಮ ಮಳೆ ಪ್ರಯೋಗಗಳಲ್ಲಿ ಯಶಸ್ವಿಯಾಗಿ ಅವರು ಕಲಕತ್ತಾ ಹಾಗೂ ಅದರ ಸುತ್ತಲಿನ ಪ್ರದೇಶದಲ್ಲಿ ಮಳೆ ಬರಿಸುವಂತೆ ಮಾಡಿದ್ದಾರೆ.

ಕಳೆದ ಎಪ್ರಿಲ್ ೧೮ರಿಂದ ಇದುವರೆಗೆ ೩೦ ಪ್ರಯೋಗಗಳನ್ನು ಮಾಡಿದ್ದಾರೆ. ಆದರೆ ಅವರ ೩೦ರಲ್ಲಿ ೨೫ ಪ್ರಯೋಗಗಳು ಯಶಸ್ವಿಯಾಗಿವೆ ಈ ಪ್ರಯೋಗಗಳ ಪರಿಣಾಮವಾಗಿ ಇನ್ನಿಗೆ ಸುಮಾರು ೪೦ ಮೈಲಿ ದೂರದಲ್ಲಿ ಈ ಮಳೆಗಾಲದಲ್ಲಿ ಬಿದ್ದ ಮಳೆಗಿಂತ ಈ ನಗರದ ಉಪನಗರವಾದ ಜಾಧವಪುರದಲ್ಲಿ ೧೫ ಅಂಗುಲ ಹೆಚ್ಚು ಮಳೆ ಬಿದ್ದಿತು.

ಯಶಸ್ವಿಯೊದ ಡಾ. ಬ್ಯಾನರ್ಜಿಯವರ ೨೫ ಪ್ರಯೋಗಗಳಲ್ಲಿ ೩ ಪ್ರಯೋಗಗಳ ಪರಿಣಾಮವಾಗಿ ದೊಡ್ಡ ಮಳೆ ಬಿದ್ದಿತ್ತೆಂದೂ ಹೇಳಲಾಗಿದೆ. ತಾವು ಪರಿಶ್ರಮಪಟ್ಟು ಹುಟ್ಟಿಸಿದ ಕೃತ್ರಿಮ ಮೋಡಗಳಿಂದ ಮಳೆ ಬಿದ್ದುದಾಗಿ ತಮಗೆ ನಂಬವರಿಕೆಯಾಗಿರುವುದೆಂದು ಅವರು ಹೇಳಿದರು.

ನಿದ್ಯಾಭ್ಯಾಸ ಕ್ರಮದಲ್ಲಿ ಸುಧಾರಣೆ

ಮದ್ರಾಸು ವಿಶ್ವವಿದ್ಯಾನಿಲಯದ ಎಕಡೆಮಿಯ ಕಾನ್ಸಿಲು ಇಂಡಿಯನ್ ಮೆಡಿಕಲ್ ಕಾನ್ಸಿಲಿನ ಶಿಫಾರಸಿನ ಮೇರೆಗೆ ವೈದ್ಯಕೀಯ ವಿದ್ಯಾಭ್ಯಾಸದ ಅವಧಿಯನ್ನು ೫ ವರ್ಷದಿಂದ ೫½ ವರ್ಷಗಳಿಗೆ ಹೆಚ್ಚಿಸಲು ನಿರ್ಣಯಿಸಿತು. ಇದು ವಿದ್ಯಾರ್ಥಿಗಳಿಗೆ ಪ್ರತ್ಯಕ್ಷ ಕಾರ್ಯದಲ್ಲಿ ಅನುಭವ ಹೆಚ್ಚುವ ದೃಷ್ಟಿಯಿಂದ ಮಾಡಲಾಗಿದೆ. ಕಾಲೇಜುಗಳಲ್ಲಿ ವಿದ್ಯಾರ್ಥಿಗಳು ಯೋಗ್ಯ ನಾಗರಿಕರಾಗುವಂತೆಯೂ ಅವರ ನೈತಿಕ ಉನ್ನತಿಯೂ ವಾರದಲ್ಲಿ ಒಂದು ಗಂಟೆ ನೀತಿ ಪಾಠಗಳನ್ನು ಕೊಡಬೇಕೆಂದು ನಿರ್ಣಯಿಸಿರುವುದು. ಇಂಟರ್ ವಿಡಿಯೇಟನಲ್ಲಿ ಈ ತನಕ ಪಾಸಾಗುವವರನ್ನು ಎರಡೇ ವರ್ಗಗಳಾಗಿ ವಿಂಗಡಿಸುತ್ತಿದ್ದರು. ಇನ್ನು ಮುಂದೆ ಮೂರು ವರ್ಗಗಳಾಗಿ ವಿಂಗಡಿಸಲಾಗುವುದು.

ವರ್ಣಬೇಧ ಧೋರಣೆಯ ಖಂಡನೆ.

ದಕ್ಷಿಣ ಆಫ್ರಿಕ ಸರಕಾರದ ವರ್ಣಬೇಧ ನೀತಿಯನ್ನು ಖಂಡಿಸುವ ಹಾಗೂ ಅಂಥೆ ನೀತಿಯ ವಿರುದ್ಧ ಅಲ್ಲಿಯ ಜನರು ಹೂಡಿದ ಹೋರಾಟಕ್ಕೆ ಬೆಂಬಲ ನೀಡುವ ಗೊತ್ತುವಳಿಯೊಂದನ್ನು ಜಲಂಧರದಲ್ಲಿ ಮೂರು ದಿನಗಳ ವರೆಗೆ ಸೇರಿ ತಾ ೧೫ರಲ್ಲಿ ಮುಕ್ತಾಯಗೊಂಡ ಅಖಿಲ ಭಾರತ ಶಾಂತಿ ಕಾಂಗ್ರೆಸ್ಸು ಸ್ವೀಕರಿಸಿದೆ. ಕೊರಿಯದಲ್ಲಿ ಶಾಂತಿ ಸ್ಥಾಪನೆಗಾಗಿ ಭಾರತವು ಕ್ರಮ ಕೈಕೊಳ್ಳಲು ಮುಂದಾಗಬೇಕೆಂದೂ ಕೇಳಿಕೊಂಡಿದೆ. ಬ್ರಿಟಿಷ್ ಸೈನ್ಯದಲ್ಲಿ ಗುರ್ಖಾ ಜನರನ್ನು ಭಾರತದ್ದ ಗಡಿಯಲ್ಲಿಯೇ ಭರ್ತಿ ಮಾಡುತ್ತಿರುವದನ್ನು ನಿಲ್ಲಿಸಬೇಕೆಂದೂ ಪರಿಷತ್ತು ವಿನಂತಿಸಿದೆ. ಗೊತ್ತುವಳಿಯ ಮೂಲಕ ಭಾರತ ಸರಕಾರಕ್ಕೆ ಕೇಳಿಕೊಂಡಿದೆ.

ಅಖಿಲ ಭಾರತ ಪತ್ರಿಕಾ ಸಂಪಾದಕರ ಸಮ್ಮೇಲನವನ್ನು ಈ ತಿಂಗಳ ತಾ. ೧೬ ರಂದು ಭಾರತದ ಉಪಾಧ್ಯಕ್ಷ ಡಾ| ರಾಧಾಕೃಷ್ಣನರು ಉದ್ಘಾಟಿಸಿದರು.

ಸರ್ವ ಸಾಧಾರಣ ಎಲ್ಲ ವಿಮಾನ ಕಂಪೆನಿಗಳು ತಮ್ಮ ಸ್ಯೂಟಿನ ದರವನ್ನು ಏರಿಸುವ ನಿರ್ಣಯವನ್ನು ಕೈಕೊಂಡಿರುವುವು. ವಿವರಗಳನ್ನು ಪ್ರಕಟಿಸಿಲ್ಲ.

'ಕೊಡಗು' ಪತ್ರಿಕೆಯ ಏಜೆಂಟರು
ಶ್ರೀ ಜೋಕರ ಪೊಣ್ಣಪ್ಪನವರು.
ನಾಪೋಕ್ಲುಗೆ

—೦೦೦—

ಯುದ್ಧ ತಪ್ಪಿಸುವುದೇ ಭಾರತದ ಧೋರಣೆ.

ಅದು ಅನ್ಯಾಯಕ್ಕೆ ಬಗ್ಗಲಾರದು.

ಜಾಗತಿಕ ಯುದ್ಧವನ್ನು ತಪ್ಪಿಸುವುದೇ ಭಾರತದ ನಿಶ್ಚಿತ ಧೋರಣೆ ಯಾಗಿರುವುದೆಂದೂ, ಜಗತ್ತಿನೊಳಗೆ ಯಾವುದೇ ಅನ್ಯಾಯಕ್ಕೆ ಭಾರತವು ಬಗ್ಗಲಾರದೆಂದೂ ಕಾಂಗ್ರೆಸ್ ಅಧ್ಯಕ್ಷ ಪಂಡಿತ ಜವಾಹರಲಾಲ್ ನೆಹರೂರವರು ಎ. ಐ. ಸಿ. ಸಿ ಸಭೆಯಲ್ಲಿ ಭಾರತದ ವಿದೇಶ ಧೋರಣೆಯನ್ನು ಕುರಿತು ಹೇಳಿದರು.

ಅ. ಭಾ. ಕಾಂಗ್ರೆಸ್ ಸಮಿತಿಯು ಸುಂದರವಾಗಿ ರಚಿಸಲ್ಪಟ್ಟ ಸಭಾಸ್ಥಾನದಲ್ಲಿ ಸೇರಿತು. ಸಮಿತಿಯರ್ಜಿಟ ಮುಂದಿ ಸದಸ್ಯರ ಪೈಕಿ ೨೩೦ ಮಂದಿ ಹಾಜರಿದ್ದರು. ಸುಮಾರು ೬೦೦ ಮಂದಿ ಪ್ರೇಕ್ಷಕರು ಚಿತ್ರಿಸಿದ್ದರು.

ಸ್ವಾಗತಾಧ್ಯಕ್ಷರ ಭಾಷಣ

ವಂದೇ ಮಾತರಂ ಹಾಡಿದ ತರುವಾಯ ಸ್ವಾಗತ ಸಮಿತಿಯ ಅಧ್ಯಕ್ಷರಾದ ಕೃಷ್ಣಯ್ಯಾಲಿ ಪಾದಿವಾರರು ಚಿಕ್ಕ ಸ್ವಾಗತ ಭಾಷಣವನ್ನಲ್ಲಿ ಭಾರತದ ಸಂಸ್ಕೃತಿಗೆ ಮುಖ್ಯ ಭಾರತವು ಮಾಡಿದ ಸೇವೆಯನ್ನೂ ಸ್ವಾತಂತ್ರ್ಯ ಜಳವಳದಲ್ಲಿ ಮಧ್ಯ ಭಾರತವು ಪಡೆದಿರುವ ಭಾಗವನ್ನೂ ಎಎಸಿ ಮಧ್ಯ ಭಾರತದ ಸಮಸ್ಯೆಯನ್ನು ತಿಳಿಯುವುದಕ್ಕೆ ಭಾರತದ ಪ್ರತಿನಿಧಿಗಳಿಗೆ ಅವಕಾಶವುಂಟಾಯಿತೆಂದೂ ಬ್ರಿಟಿಷರ ಕಾಲದಲ್ಲಿ ಮಧ್ಯ ಭಾರತದ ಕಡೆಗೆ ಲಕ್ಷ್ಯ ಕೊಟ್ಟರಲಿಲ್ಲವೆಂದೂ ಹೇಳಿದರು ಮಧ್ಯ ಭಾರತದ ದೇಶೀಯ ರಾಜರುಗಳ ಸಂಸ್ಥಾನಗಳನ್ನು ಮಧ್ಯ ಭಾರತದೊಡನೆ ಸೇರಿಸಿ ಒಂದುಗೂಡಿಸಿದುದಕ್ಕಾಗಿ ಮಧ್ಯ ಭಾರತವು ದಿವಂಗತ ಸರದಾರ ಪಟೇಲರಿಗೆ ಕೃತಜ್ಞತೆಯನ್ನು ಅರ್ಪಿಸುವುದೆಂದೂ ಹೇಳಿದರು. ಪಂಡಿತ ಜವಾಹರರ ಕುರಿತು 'ಶಕ್ತಿಯ ಸ್ತಂಭ' ವಾಗಿರುವರೆಂದು ಹೇಳಿದರು.

ಅಧ್ಯಕ್ಷರ ಭಾಷಣ

ಸ್ವಾಗತಾಧ್ಯಕ್ಷರ ಭಾಷಣವಾದ ತರುವಾಯ ಕಾಂಗ್ರೆಸ್ ಅಧ್ಯಕ್ಷರಾದ ಪಂಡಿತ ಜವಾಹರಲಾಲ ನೆಹರುಗಳು ಒಂದು ತಾಸಿನ ವರೆಗೆ ಭಾಷಣ ಮಾಡಿದರು.

ಆರಂಭದಲ್ಲಿ ಪಂಡಿತ ಜವಾಹರಲಾಲ ನೆಹರುಗಳು ಅಂತರಾಷ್ಟ್ರ ಧೋರಣೆಯ ಕುರಿತು ತಯಾರಿಸಲಾಗಿದ್ದ ಕರಡು ತೀರಾವಿನ ಮಹತ್ವವನ್ನು ವಿವರಿಸಿ ಅದನ್ನು ಸಮಿತಿಯ ಚರ್ಚಿಸಿ ಮಂಜೂರು ಮಾಡಬೇಕೆಂದರು 'ನಾವು ಒಳದೇಶದ ವಿಚಾರಕ್ಕಿಂತಲೂ ಅಂತರ ರಾಷ್ಟ್ರ ವಿಚಾರದಲ್ಲಿ ಹೆಚ್ಚು ಶಕ್ತಿ ಕಾರ್ಯಕಾರಿ ಸಮಿತಿಯವರು ತೋರಿಸುತ್ತಾರೆಂದು ಆಲೋಚಿಸಬಹುದು. ಆದರೆ ನನ್ನ ವಿಷಯದಲ್ಲಿಯೇ ಹಾಗಿಲ್ಲ. ಅಂತರ ರಾಷ್ಟ್ರ ವಿಚಾರವು ನನಗೆ ಹೊಸತ್ತೇ ಅಲ್ಲ ಅದು ಲೋಕಕ್ಕೆ ಮತ್ತು ನಮಗೆ ಅಗತ್ಯವಾಗಿ ಬೇಕಾದುದು. ಲೋಕದಲ್ಲಿ ಶಾಂತಿಯಾಗಲೀ ಯುದ್ಧವಾಗಲೀ ಆಗದೆ ಇರುವುದಿಲ್ಲ. ಯಾವ ಪಂಗಡದೊಡನೆಯೂ ಸೇರುವುದಿಲ್ಲವೆಂಬ ಧೋರಣೆಯು ನಮ್ಮ ಜಾಡರೂ ನಾವು ಪ್ರಪಂಚ ರಾಷ್ಟ್ರಗಳಿಂದ ಪ್ರತ್ಯೇಕವಾಗಿ ಇರಲು ಸಾಧ್ಯವಿಲ್ಲ. ನಾವು ಲೋಕದಲ್ಲಿ ದೊಡ್ಡ ವಿಪತ್ತುಂಟಾಗದಂತೆ ಮಾಡಲು ಸಾಧ್ಯವಿರುವ ಪ್ರಯತ್ನಗಳನ್ನು ಮಾಡುತ್ತೇವೆ.

ಮುಂದುವರಿಸುತ್ತಾ ಪಂಡಿತ ನೆಹರುಗಳು ದಕ್ಷಿಣ ಆಫ್ರಿಕದಲ್ಲಿ ನಡೆಯುತ್ತಿರುವ ಸತ್ಯಾಗ್ರಹದ ಕುರಿತು ಹೇಳಿದರು. ಭಾರತದ ಸ್ವಾತಂತ್ರ್ಯ ಸಮರ ದಕ್ಷಿಣ ಆಫ್ರಿಕದಲ್ಲಿ ಮಹಾತ್ಮರ ಮುಂದಾಳತನದಲ್ಲಿ ಆರಂಭವಾಯಿತೆಂದು ಹೇಳಬಹುದೆಂದರು. ದಕ್ಷಿಣ ಆಫ್ರಿಕದ ಕುರಿತು ತರಾವು ಬರಲಿದೆಯೆಂದೂ ಅದನ್ನು ಸಗ್ಯಲೋಚಿಸಿ ಅ. ಭಾ. ಕಾಂ ಕಮಿಟಿಯು ಮಂಜೂರು ಮಾಡಬೇಕೆಂದೂ ಸೂಚಿಸಿ ದಕ್ಷಿಣ ಆಫ್ರಿಕದ ವರ್ಣದ್ವೇಷದ ವಿಷಯವಾಗಿ ಏನು ಮಾಡಬೇಕೆಂಬುದು ಲೋಕಕ್ಕೆ ತಿಳಿದಿಲ್ಲ ಶಾಂತಿಯಿಂದ ಈ ಪ್ರಶ್ನೆ ಬಗೆ ಹರಿಯಬೇಕೋ ಅಥವಾ ರಕ್ತಪಾತದಿಂದಲೋ? ಎಂಬ ಕುರಿತು ಪ್ರಪಂಚವು ಇಂದು ಚಿಂತೆಗೊಳಗಾಗಿದೆ. ಆಫ್ರಿಕದ ಪ್ರಶ್ನೆಯನ್ನು ಶಾಂತ ರೀತಿಯಿಂದ ಬಗೆಹರಿಸಲು ಸಾಧ್ಯವಿದೆಯೆಂದು ಹೇಳಿದರು.

ಅಂತರಾಷ್ಟ್ರ ವಿಚಾರವೂ ದಕ್ಷಿಣ ಆಫ್ರಿಕದ ವಿಚಾರವೂ ಮುಖ್ಯವೆಂದು ಸಾರಿದರೂ ದೇಶದ ಆರ್ಥಿಕ ಸುಧಾರಣೆಯು ಅತೀ ಮುಖ್ಯವಾಗಿದೆ.

ಭಾಷಣಕ್ಕೆ ತಡೆ.

ಪಂಡಿತ ನೆಹರುಗಳು ಭಾಷಣದ ಮಧ್ಯದಲ್ಲಿ ತಮ್ಮ ಭಾಷಣ ನಿಲ್ಲಿಸಬೇಕಾಯಿತು. ಮಳೆಬಿದ್ದುದರಿಂದ ಚಪ್ಪರಕ್ಕೆ ಹಾಕಿದ ತಗಡುಗಳು ದೊಡ್ಡ ಶಬ್ದ ಮಾಡಿದ್ದರಿಂದ ಅವರ ಮಾತು ಕೇಳಿಸುತ್ತಿರಲಿಲ್ಲ. ಹಾಗಾಗಿ ಮಾತನ್ನು ಸ್ವಲ್ಪ ನಿಲ್ಲಿಸಿ ಮಳೆಗೆ ಸ್ವಾಗತವಿತ್ತರು.

ಮಳೆನಿಂತ ಮೇಲೆ ತಮ್ಮ ಭಾಷಣವನ್ನು ಮುಂದರಿಸುತ್ತಾ ಪ್ರಾಂತ ಪ್ರಾಂತಗಳೊಳಗೆ ಸ್ಪರ್ಧೆ ಪಡೆಯಕೂಡದೆಂದೂ ದೇಶದ ಕೆಲವೆಡೆಗಳಲ್ಲಿ ಹಿಂಸಾಕೃತ್ಯಗಳು ಕಾಣಿಸಿಕೊಳ್ಳುತ್ತಿವೆಯೆಂದೂ ಹೇಳಿದರು.

ಬಂಗಾಳ—ಬಿಹಾರಗಳ ಚರ್ಚೆಯನ್ನು ಇಷ್ಟು ಉಗ್ರ ರೂಪ ತಾಳಿದುದಕ್ಕೆ ವ್ಯಸನ ಸೂಚಿಸಿದರು. ದೇಶದ ವಿಭಜನೆದೂದ ಮೇಲೆ ಪಶ್ಚಿಮ ಬಂಗಾಲವು ತುಂಬಾ ಕಷ್ಟನಷ್ಟಗಳಿಗೆ ಗುರಿಯಾಗಿದೆ. ಪೂರ್ವಬಂಗಾಳದಿಂದ ಹೆಚ್ಚು ಮಂದಿ ನಿರಾಶ್ರಿತರು ಪಶ್ಚಿಮ ಬಂಗಾಳಕ್ಕೆ ಬಂದಿದ್ದಾರೆ. ಪಶ್ಚಿಮ ಬಂಗಾಳದ ಕಷ್ಟವು ನನಗೆ ತಿಳಿದಿದೆ. ಒಂದೇ ದೇಶಕ್ಕೆ ಸೇರಿದ ಎರಡು ಪ್ರಾಂತ್ಯಗಳು ಪರಸ್ಪರ ಟೀಕಿಸಿಕೊಳ್ಳುವುದನ್ನು ನೋಡಿ ಆಶ್ಚರ್ಯಕ್ಕೊಳಗಾಗಿದ್ದೇನೆ. ಎರಡು ದೇಶಗಳೊಳಗೆ ವಿವಾದಗಳಿದ್ದರೆ ಅದನ್ನು ಶಾಂತ ರೀತಿಯಿಂದ ಬಗೆಹರಿಸಿಕೊಳ್ಳಬೇಕು. ಅದಕ್ಕಾಗಿ ಶಾಂತ ವಾತಾವರಣವನ್ನು ಕಲ್ಪಿಸಬೇಕು.

ಕಾಂಗ್ರೆಸ್ ಕಾರ್ಯವು ಸ್ವಾತಂತ್ರ್ಯ ದೊರೆತೊಡನೆ ಮುಗಿದಿಲ್ಲ. ದೊರೆತ ಸ್ವಾತಂತ್ರ್ಯವನ್ನು ಇನ್ನೂ ಬಲಪಡಿಸಬೇಕು. ದೇಶದ ಮುಂದಿರುವ ಆರ್ಥಿಕ ಪ್ರಶ್ನೆಗಳನ್ನು ಸುಧಾರಿಸಿಕೊಳ್ಳಬೇಕು. ಈ ಕೆಲಸಗಳು ಕಾಂಗ್ರೆಸಿಗೆ ಮುಖ್ಯ ಸಾಧ್ಯ.

ಅಧ್ಯಕ್ಷರ ಭಾಷಣದ ಮುಗಿದ ಮೇಲೆ ಠರಾವುಗಳು ಒಂದೊಂದಾಗಿ ಮಂಡಿಸಲ್ಪಟ್ಟವು.

ನೆಹರೂರವರ ಭಾಷಣದ ನಂತರ ಈ ಕೆಳಗಿನ ಕಾಂಗ್ರೆಸ್ ಘಟನಾ ತಿದ್ದುಪಡಿಗಳು ವಂಜೂರಾದವು.

ಕಾಂಗ್ರೆಸ್ ಘಟನೆಯ ೩೦ ಸೂತ್ರಗಳಲ್ಲಿ ೧೬ ಸೂತ್ರಗಳನ್ನು ಎ. ಐ. ಸಿ. ಸಿ. ಯು ಇಂದು ತಿದ್ದುಪಡಿ ಮಾಡಿತು. ವರ್ಕಿಂಗ್ ಕಮಿಟಿಯವರು ತಯಾರಿಸಿದ ತಿದ್ದುಪಡಿಗಳ ಚರ್ಚೆಯಾದ ನಂತರ ಕೆಳಗಿನ ತಿದ್ದುಪಡಿಗಳು ಸ್ವೀಕೃತವಾದುವು.

೧) ಕೇಂದ್ರ ಹಾಗೂ ಶಾಸನ ಸಭೆಗಳಲ್ಲಿಯ ಕಾಂಗ್ರೆಸ್ ಪಕ್ಷದ ಸದಸ್ಯರು ಸಂಸ್ಥೆಯ ಸಮಿತಿಯ ಕಾರ್ಯ ಕಲಾಪಗಳಲ್ಲಿ ಭಾಗವಹಿಸಲು ಸಹಾಯಕ ಸದಸ್ಯತ್ವ ಕೊಡುವುದು.

ಕಾಂಗ್ರೆಸ್ ಕಾರ್ಯ ಸಮಿತಿಯಲ್ಲಿ ಮೂವರಲ್ಲಿ ಒಂದು ಪಾಲಿನಷ್ಟು ಮಂತ್ರಿಗಳಿಗಿರಬೇಕೆಂಬ ಘಟನೆಯ ನಿಯಮವನ್ನು ಕಿತ್ತುಹಾಕಲಾಯಿತು

ಕಾಂಗ್ರೆಸ್ ಉಪಾಧ್ಯಕ್ಷರಿರಬೇಕೆಂದು ಶ್ರೀ ಹನುಮಂತಯ್ಯನವರು ಸೂಚಿಸಿದಾಗ ಸದ್ಯಕ್ಕೆ ಅವರ ಅವಶ್ಯಕತೆ ಇಲ್ಲವೆಂದೂ ಶ್ರೀ ನೆಹರೂರವರು ಹೇಳಿದ್ದರಿಂದ ಸೂಚನೆಯು ಹಿಂತೆಗೆಯಲ್ಪಟ್ಟಿತು.

ಶ್ರೀ ಗಳಾದ ಮಶ್ರೂವಾಲ, ಹರನಾರಾಯಣವಾಜಪೇಯಿ, ವೇದಾಚಲ ಮೊದಲಿಯಾರ್, ಬಿ. ಎನ್. ಮಹೇಶ್ವರಿ, ಭೂಟಲಾಲ ಗುಪ್ತ ಈ ಮಹಾನಿಯರ ನಿಧನದ ಬಗ್ಗೆ ಗೊತ್ತುವಳಿಗಳನ್ನು ಸದಸ್ಯರು ಎದ್ದು ನಿಂತು ಸ್ವೀಕರಿಸಿದರು.

ಕೊಡಗಿನ ಗ್ರಾಮಾಂತರ ರಸ್ತೆಗಳಿಗೆ ೧॥ ಲಕ್ಷ ರೂ. ಮಂಜೂರಾತಿ

ಈ ಕೆಳಗೆ ಕಾಣಿಸಿದ ಗ್ರಾಮ ರಸ್ತೆ ಮತ್ತು ಸೇತುವೆಗಳ ಅಭಿವೃದ್ಧಿಗಾಗಿ ೧೯೫೨-೫೩ನೇ ಸಾಲಿನಲ್ಲಿ ಖರ್ಚು ಮಾಡಲು ಕೊಡಗು ಸರಕಾರವು ತೀರ್ಮಾನಿಸಿರುವುದು.

ನಂ.	ಹೆಸರು	ಮೊಬಲಗು
1.	ಮರಗೋಡು ರಸ್ತೆ	10,000
2.	ಕುಂಬಳದಾಳು ,,	7,000
3.	ಬಿಳಿಗೇರಿ ರಸ್ತೆ	2,000
4.	ಪೆರಾಜೆ ರಸ್ತೆ	1,500
5	ಜೆಂಬು ರಸ್ತೆ	3000
6.	ಬೆಟ್ಟತ್ತೂರು ರಸ್ತೆ	500
7.	ಅಮ್ಮಂಡೂರು ,,	500
8.	ಮೊಣಕಾಲ್ಮೂರು ಒಳರಸ್ತೆ	500
9.	ಉಡ್ಡೋತ್ ಮೊಟ್ಟೆ	1,000
10.	ವೀರಾಜಪೇಟೆ-ಕಾಟಕೇರಿ ಸೇತುವೆ —1,000	
11.	ಜೆಂಬು ಪಾಲ	4,500
12.	ಕಾಲೂರು ಪಾಲ (ಅಬಿದೂರು) —3500+500 (ಡಿ. ಬಿ ಫಂಡಿನಿಂದ)	
13.	ಕೂಟ್-ಹೊಳೆ ಪಾಲ	3000
14.	ಮಂಡೆ ರೋಡು	500
15.	ಒಳ್ಳೆತೋಡು ಸೇತುವೆ	1,750
16.	ಮುಳ್ಳೂರ್ಕಾಡ್ಲು ಸೇತುವೆ (ಪೂರ್ಣಗೊಳಿಸಲು) —750	
17.	ಪೊಳ್ಳಬೆಟ್ಟ-ಗಟ್ಟದಳ್ಳ ರಸ್ತೆ —17,000	
18.	ಪೊಳ್ಳಬೆಟ್ಟ-ಚೆನ್ನಂಗಿ ರಸ್ತೆ	600
19.	ಚೆನ್ನಂಗಿ-ಕೊಂಡಂಗೇರಿ ಚೆನ್ನಂಗಿ ರಸ್ತೆ —600	
20.	ಚೆನ್ನಂಗಿ ಸೇತುವೆ	800
21.	ವಾಲ್ನೂರು ಜೋರಿ	300
22.	ಕಾನಂಗಾಡು-ವಾಲ್ನೂರು ರಸ್ತೆ —700	
23.	ಕಡಂಗ-ಪಾರಾಣೆ ರಸ್ತೆ	5,000
24.	ಕಕ್ಕಬೆ-ನೆಲಜಿ ರಸ್ತೆ (೧ಪೇರಿ ಗಾಡಿ)	8,000
25.	ಬಾನಲಿ-ಚೆಮ್ಮಂಡಾಣೆ ರಸ್ತೆ —2,000	
26.	ಮೂರಿಕಡು ಸೇತುವೆ (ಕೊಳಕೇರಿ) —3,000	
27.	ನಾಪೋಕ್ಲು-ನೆಲಜಿ ರಸ್ತೆ	3,000
28.	ಚೆನ್ನನಕೊಲ್ಲಿ-ಬಾಳೆಲೆ ರಸ್ತೆ —5000+7000 (ಡಿ. ಬಿ. ಫಂಡಿನಿಂದ)	
29.	ಪೊನ್ನಂಪೇಟೆ-ನಲ್ಲೂರು ರಸ್ತೆ —2,000	
30.	ಪೊನ್ನಂಪೇಟೆ-ಕಾನೂರು ರಸ್ತೆ —5000	
31.	ಪೊನ್ನಂಪೇಟೆ-ಹಳ್ಳಿಗಟ್ಟು ರಸ್ತೆ —2,000	
32	ಬಾಳಾಜಿ ಪಾಲ	2,000
33.	ನಡುಗುಂಡಿ ಪಾಲ (ಕುತ್ತುನಾಡು) —4 225	
34.	ಟಿ ಶೆಟ್ಟಿಗೇರಿ-ಬೀರಾನಾಣಿ ಸೇತುವೆ —30,000	
35.	ಕಾನೂರು ಬಾಳೆಕೋವು ರಸ್ತೆ ಕೋತೂರಾಗಿ	4775
36.	ಸಣ್ಣಪುಲಿಕೋಟೆಗೆ ಹೋಗುವ ಬಂಡಿಕಡು ಸೇತುವೆ	5,000
37.	ಜೇರಂಗಾಲ-ಸೇತುವೆ	2000
38.	ಉದಯನಪಾಲ-ಸಣ್ಣ ಪುಲಿಕೋಟು ಪಾಲ	2,000
39.	ತಣ್ಣಿಮಾನಿ ೨ ಪಾಲಗಳು	4000
	ಜುಮ್ಮು ರೂ.	1,50,000

ಪೆಕಿಂಗ್‌ನಲ್ಲಿ ಕಾ. ೨೫ರಂದು ನಡೆಯಲಿರುವ ಶಾಂತಿ ಪರಿಷತ್ತಿಗೆ ಭಾರತದಿಂದ ೫೦ ಸದಸ್ಯರ ಶಿಷ್ಟ ಮಂಡಲವು ಹೋಗುವ ನಿರೀಕ್ಷೆ ಇದೆ.

॥ ಕ್ಷಯದ ಸೋಂಕನ್ನು ಹೇಗೆ ಕಂಡುಹಿಡಿಯಬಹುದು? ॥

(ಲೇ—ಡಾ. ವಿ. ಆರ್. ಭಟ್, ಎಂ. ಬಿ. ಬಿ. ಎಸ್., ಟಿ. ಡಿ. ಡಿ.)

ಕ್ಷಯ ರೋಗವು ಮಕ್ಕಳಲ್ಲಿಯೂ ವಯಸ್ಕರಲ್ಲಿಯೂ ಸಾಮಾನ್ಯವಾಗಿ ಯಾವ ವಯಸ್ಸಿನಲ್ಲೂ ಕಂಡುಬರಬಹುದಾಗಿದೆ ಎಂಬುದನ್ನು ಈ ಮೊದಲೇ ನಾವು ತಿಳಿದಿರುವೆವು. ಒಬ್ಬ ಮನುಷ್ಯನಲ್ಲಿ ಕ್ಷಯ ರೋಗದ ಚಿಹ್ನೆಗಳು ಖಂಡಿತವಾಗಿಯೂ ಇವೆ ಎಂಬುದನ್ನು ನಾವು ಹೇಗೆ ತಿಳಿಯಬಹುದು? ರೋಗದ ಆರಂಭದ ದೆಶೆಯಲ್ಲಿ ನಿರ್ದಿಷ್ಟವಾಗಿ ಹೇಳುವುದು ಕಷ್ಟವಾಗಬಹುದು. ಆದರೆ ರೋಗವು ಬೆಳೆದ ಹಾಗೆಲ್ಲಾ ಅದರ ಲಕ್ಷಣಗಳನ್ನು ಗುರುತಿಸುವುದು ಸುಲಭವಾಗುವುದು. ಈ ರೋಗಕ್ಕೆ ಸಂಬಂಧಪಟ್ಟ ಲಕ್ಷಣಗಳು ಯಾವುವು ಎಂಬುದನ್ನು ತಿಳಿದರೆ ಮತ್ತು ಅವುಗಳನ್ನು ಗುರುತಿಸಲು ಪ್ರಯತ್ನಪಟ್ಟರೆ ರೋಗದ ಸೋಂಕನ್ನು ಸುಲಭವಾಗಿ ಕಂಡುಹಿಡಿಯಬಹುದು.

ಮಕ್ಕಳಲ್ಲಿ ಹೇಗೆ ಗುರುತಿಸಬಹುದು?

೧. ತೂಕ—ಐದು ವರ್ಷದ ಕೆಳಗಿನ ಮಕ್ಕಳು ಕ್ರಮವಾಗಿ ತೂಕದಲ್ಲಿ ಹೆಚ್ಚುತ್ತಿದ್ದಾರೆ; ಪ್ರಾಯ ಕಡಿಮೆಯಾದಷ್ಟು ತೂಕದ ವಾಡಿಕೆ ಹೆಚ್ಚು. ಒಂದು ವರ್ಷಗಾವಿನಲ್ಲಿ ದೀರ್ಘಕಾಲದ ವರೆಗೆ ತೂಕದಲ್ಲಿ ಏನೆಂಬಷ್ಟು ರೀತಿಯು ಹೆಚ್ಚಳ ಕಂಡು ಬಾರದಿದ್ದರೆ ಹೆತ್ತವರು ಆ ಮಗುವಿನ ಕಡೆಗೆ ಜಾಗ್ರತೆ ವಹಿಸುವುದವಶ್ಯ. ಆ ಮಗು ತೂಕದಲ್ಲಿ ಇಳಿಯುವುದೆಂದು ಕಂಡು ಬಂದರೆ ಆ ಸ್ಥಿತಿ ಇನ್ನಷ್ಟು ಹಾಳು; ಅಂತಹ ಮಗುವನ್ನು ಕೂಡಲೇ ವೈದ್ಯರಿಂದ ಪರೀಕ್ಷಿಸತಕ್ಕದ್ದು.

೨. ಸಾಮಾನ್ಯ ಆರೋಗ್ಯ ಮತ್ತು ಚಟುವಟಿಕೆ.

ಬೆಳೆಯುತ್ತಿರುವ ಮಗು ಯಾವಾಗಲೂ ಚೇತನದಿಂದ ತುಂಬಿ ತುಳುಕಾಡುತ್ತಿದೆ. ಆಟದಲ್ಲಿ ಅದು ಆಸಕ್ತಿ ತೋರಿಸುವುದು. ಕ್ರಮಬದ್ಧವಾಗಿ ಅದು ನಿದ್ರೆ, ಆಹಾರ ಮತ್ತು ಆಟಗಳಲ್ಲಿ ಭಾಗವಹಿಸುವುದು. ಮಗುವಿನ ಸಾಮಾನ್ಯ ಆರೋಗ್ಯ ನೆಟ್ಟಗಿಲ್ಲದಿದ್ದರೆ ಅದು ಆಟದಲ್ಲಿ ಅಭಿರುಚಿ ತೋರಿಸದಿರಬಹುದು. ಯಾವಾಗಲೂ ಜೋಂಪು ಹಿಡಿದ ಹಾಗೆ, ಬೇಸರದಿಂದಿರುವಂತೆ ಕಂಡುಬರಬಹುದು. ಯಾವಾಗಲೂ ಸಿಡುಕು ತೋರಿಸಬಹುದು. ತಿಲ್ಲದೆ ಆ ಮಗುವಿಗೆ ರಾತ್ರಿ ಕಾಲದಲ್ಲಿ ಸುಖನಿದ್ರೆ ದೊರೆಯದೆ, ಅದು ಆಗಾಗ ನಿದ್ದೆಯಲ್ಲಿ ಭಯಭ್ರಾಂತವಾದಂತೆ ಎದ್ದು ಕೂತುಕೊಳ್ಳಬಹುದು.

೩. ಬೆಳೆದ ಗ್ರಂಥಿಗಳು.

ದೇಹದ ಯಾವುದೇ ಭಾಗದಲ್ಲಿ ಗ್ರಂಥಿಗಳು (ಗ್ಲಾಂಡ್ಸ್) ಬೆಳೆದುದು ಇಲ್ಲವೆ ದೊಡ್ಡದಾದುದು ಕಂಡುಬಂದರೆ ಅದನ್ನು ವೈದ್ಯರಿಂದ ಕೂಡಲೇ ಪರೀಕ್ಷಿಸಬೇಕು. ಸಾಮಾನ್ಯವಾಗಿ ಕತ್ತಿನಲ್ಲಿ ಕಂಠಿಗೆಯ ಗ್ರಂಥಿಗಳು ಬೆಳೆದುದು ಕಂಡುಬರುತ್ತದೆ; ಇದು ಗ್ರಂಥಿಗಳಲ್ಲಿ ಕ್ಷಯದ ಸೋಂಕನ್ನು ಸೂಚಿಸಬಹುದು.

೪. ಜ್ವರ—ಆಗಾಗ ಜ್ವರ ಬರುವುದು, ಕೆಲ ಸಮಯ ನಿಂತಂತಾಗಿ ಪುನಃ ಕಾಣಿಸಿಕೊಳ್ಳುವುದು, ಆಗಾಗ ಶೀತದ ಬಾಧೆ ಈ ಲಕ್ಷಣಗಳು ಕಂಡು ಬಂದಾಗ ಮಗುವನ್ನು ವೈದ್ಯರಿಗೆ ತೋರಿಸಲು ಮರೆಯಬಾರದು.

೫. ದೀರ್ಘಕಾಲೀನ ಅತಿಸಾರ.

(ಕ್ರಾನಿಕ್ ಡಯೊರ್ಯ) ಸಾಮೊಪ್ಯ ಅನುಪಾನ ವೂರ್ಣಾಟದಿಂದ ನಿಲ್ಲದ ದೀರ್ಘಕಾಲೀನ ಅತಿಸಾರವನ್ನು ಜಾಗೃತಿಯಾಗಿ ಪರೀಕ್ಷಿಸತಕ್ಕದ್ದು.

೬. ಹೊಟ್ಟೆಯುಬ್ಬಿ ಮಿತಿಮೀರಿ ಬೆಳೆದಿರುವುದು.

ವಯಸ್ಕರಿಗಿಂತ ಮಕ್ಕಳಲ್ಲಿ ಹೊಟ್ಟೆಯು ಹೆಚ್ಚು ಪ್ರಧಾನವಾಗಿದೆ. ಹೊಟ್ಟೆಯು ಸಾಮಾನ್ಯ ಮಿತಿಗಿಂತ ಅಧಿಕವಾಗಿ ಬೆಳೆದದ್ದು ಕಂಡುಬಂದರೆ ಅಂತಹ ಮಗುವನ್ನು ಕೂಡಲೇ ವೈದ್ಯರ ಪರೀಕ್ಷೆಗೊಳಪಡಿಸಬೇಕು. ಅಂತಹ ಸ್ಥಿತಿ ಕುಟಿಲವಾತ (ರಿಕೆಟ್) ಇಲ್ಲವೆ ದೀರ್ಘಕಾಲದ ಮಲೇರಿಯೂ ಅಥವಾ ಕರಳು ಇಲ್ಲವೆ ಹೊಟ್ಟೆಯ ಗ್ರಂಥಿಗಳ ಸಂಬಂಧವಾದ ಕ್ಷಯದಿಂದ ಉಂಟಾದುದಿರಬಹುದು.

೭. ಚಿಕ್ಕಪುಟ್ಟ ಘಾಯಗಳಿಂದುಂಟಾಗುವ ನ್ಯೂನತೆಗಳು.

ಮಕ್ಕಳ ಎಲುಬುಗಳು ವಯಸ್ಕರ ಎಲುಬಿನಷ್ಟು ಪಿಸಕು ಬ್ರಿಟ್ಲ್ ಇರುವುದಿಲ್ಲ. ಆದುದರಿಂದ ಮೇಲಿಂದ ಕೆಳಗೆ ಬೀಳುವ ಚಿಕ್ಕಪುಟ್ಟ ಅವಘಡಗಳು ಸಂಭವಿಸುವಾಗ ಮಕ್ಕಳಲ್ಲಿ ಎಲುಬು ಸುಲಭವಾಗಿ ತುಂಡಾಗುವುದಿಲ್ಲ. ಆದರೆ ಎಲುಬು ಇಲ್ಲವೆ ಸಂದು (ಜಾಯಿಂಟ್) ಕ್ಷಯರೋಗದ ಸೋಂಕಿನಿಂದ ನಿರ್ಬಲವಾಗಿದ್ದರೆ, ಕಾಲು ಜಾರಿ ಬೀಳುವ ಚಿಕ್ಕ ಪುಟ್ಟ ಅವಘಡವೇ ಅಸ್ಥಿಭಂಗಕ್ಕೆ (ಫ್ರೆಕ್ಚರ್) ಕಾರಣವಾಗಬಹುದು. ಅಂತಹ ನಿರ್ಬಲ ಮಕ್ಕಳಿಗೆ ಕೂಡಲೇ ಯೋಗ್ಯಚಿಕಿತ್ಸೆ ನಡೆಸತಕ್ಕದ್ದು.

ವಯಸ್ಕರಲ್ಲಿ ರೋಗದ ಲಕ್ಷಣಗಳು.

ಈ ಅಧ್ಯಾಯದಲ್ಲಿ ನಾವು ಮುಖ್ಯವಾಗಿ ಶ್ವಾಸಕೋಶ ಸಂಬಂಧವಾದ ಕ್ಷಯದ ಲಕ್ಷಣಗಳ ಕುರಿತಾಗಿಯೇ ವಿವೇಚಿಸುವಾ. ಇತರ ಅವಯವಗಳ ಸಂಬಂಧವಾದ ಲಕ್ಷಣಗಳನ್ನು, ಆ ಅವಯವಗಳ ಕುರಿತಾದ ಸೋಂಕಿನ ಕುರಿತು ವಿವೇಚಿಸುವಾಗ ಸೂಚಿಸುವೆವು. ಶ್ವಾಸಕೋಶ ಸಂಬಂಧವಾದ ಕ್ಷಯದ ಸಾಮಾನ್ಯವಾದ ಲಕ್ಷಣಗಳೆಂದರೆ ಜ್ವರ ಮತ್ತು ವೈಬವರುವುದು, ಕೆಮ್ಮು, ತೂಕದಲ್ಲಿ ಇಳಿತ, ಸಾಡಿ ಖಡಿತ ಮತ್ತು ಉಸಿರಾಟದ ಕ್ರಮ ತೀವ್ರಗೊಳ್ಳುವುದು, ನಿಶ್ಶಕ್ತಿ, ಹಸಿವೆ ಇಲ್ಲದಿರುವುದು ಇತ್ಯಾದಿ.

ಜ್ವರ—ಜ್ವರವು ಕ್ಷಯರೋಗದ ಏಕಮಾತ್ರ ಪ್ರಧಾನ ಲಕ್ಷಣವಾಗಿರುವುದರಿಂದ ಈ ವಿಷಯ ಕುರಿತು ವಿವರಣೆ ಅತ್ಯವಶ್ಯ. ದೀರ್ಘಕಾಲದ ವರೆಗೆ ಶರೀರದ ಸಾಮಾನ್ಯ ಉಷ್ಣಕ್ಕಿಂತ ಹೆಚ್ಚಿಗೆ ಉಷ್ಣವು ಕಂಡುಬರುವುದೇ ಜ್ವರವೆಂದು ಕರೆಯಲ್ಪಡುವುದು. ವೈದ್ಯರು ಉಷ್ಣವು ಹೆಚ್ಚಿದೆಯೋ ಎಂಬುದನ್ನು ಶರೀರೋಷ್ಣತೆ (ಟೆಂಪರೇಚರ್) ಇಲ್ಲವೆ ಡಿಗ್ರಿಸ್ ಫ್ಯಾರೆನ್‌ಹೈಟ್ (ಥರ್ಮಾಮೀಟರ್) ಎಂದು ಕರೆಯಲ್ಪಡುವ ತಾಪಮಾಪಕ ಯಂತ್ರದಿಂದ ಅಳೆಯಬಹುದಾಗಿದೆ. ಜ್ವರ ಅಳೆಯುವ ಈ ತಾಪಮಾಪಕ ಯಂತ್ರವು (ಥರ್ಮಾಮೀಟರ್) ಒಳ್ಳೆಯ ದರ್ಜೆಯದಾಗಿದ್ದು ಸರಿಯಾದ ಅಳತೆ ಕೊಡುವಂತಹದಾಗಿರಬೇಕು. ಉಪಯೋಗಕ್ಕೆ ಮೊದಲು ಅದು ಸ್ವಚ್ಛವಾಗಿರಬೇಕು. ಮತ್ತು ಒಣಗಿರಬೇಕು. ಆದರಲ್ಲಿರುವ ಪಾದರಸದ ಮಟ್ಟ ೯೬ F ಗುರುತಿಗಿಂತ ಕೆಳಗಿರಬೇಕು. ಈ ತಾಪಮಾಪಕ ಯಂತ್ರದ ಅಡಿಭಾಗವನ್ನು (ಪಾದರಸವಿರುವ ಭಾಗ) ಬಾಯಿಯೆಳಗೆ ಇಲ್ಲವೆ ಗುದದ್ವಾರದೊಳಗೆ (ರಿಕ್ಟಂ) ಇಟ್ಟರೆ ದೇಹದ ಸರಿಯಾದ ಉಷ್ಣ ಅಳೆಯಬಹುದಾಗಿದೆ. ಕಂಕುಳಲ್ಲಿ ಅದನ್ನಿಟ್ಟರೆ ತೃಪ್ತಿಕರವಾದ ಫಲಿತಾಂಶ ದೊರೆಯುವುದಿಲ್ಲ. ಒಂದು ವೇಳೆ ಹಾಗೆ ಉಷ್ಣ ಅಳೆಯುವುದಿದ್ದರೆ, ತಾಪಮಾಪಕ ಯಂತ್ರವನ್ನು ಇಡುವ ಮೊದಲು ಕಂಕುಳಲ್ಲಿ ಚೆನ್ನಾಗಿ ಉಜ್ಜಿ, ತಾಪಮಾಪಕ ಯಂತ್ರವು ನೇರಾಗಿ ಮುಟ್ಟುವ ಚರ್ಮ ಒಣಗಿರುವಂತೆ ಜಾಗ್ರತೆ ವಹಿಸಬೇಕು. ತಾಪಮಾಪಕ ಯಂತ್ರವನ್ನು ಯಾವುದೇ ಭಾಗದಲ್ಲಿ ಉಪಯೋಗಿಸಿದರೂ ಅದು ಆ ಭಾಗದಲ್ಲಿ ಕನಿಷ್ಟಪಕ್ಷ ಐ ನಿಮಿಷಗಳಷ್ಟಾದರೂ (ತಾಪಕ ಯಂತ್ರದಲ್ಲಿ ½ ನಿಮಿಷ ಎಂದು ಬರೆದಿದ್ದರೂ) ಇರಬೇಕು. ಆಗ ಕಾನೇ ಆಧಾರಭೂತವಾದ ಅಳತೆ ಸಿಗಬಹುದು. ಬಾಯಿಯಲ್ಲಿ ತಾಪಕ ಯಂತ್ರವನ್ನು ಇಡುವುದಿದ್ದರೆ ಆಹಾರ ಸೇವಿಸುವುದಕ್ಕೆ ಮುಂಚೆ ಇಲ್ಲವೆ ಸೇವಿಸಿದ ಒಂದು ತಾಸಿನ ನಂತರ ಇಡತಕ್ಕದ್ದು. ಕಾರಣ ಆಹಾರ ಸೇವಿಸುವುದರಿಂದ ಬಾಯಿಯು ಉಷ್ಣದಲ್ಲಿ ಏರುಪಾಟುಗಳಾಗಬಹುದಾಗಿದೆ. ಬಿಸಿಯೂದ ಪಾನಿಯವನ್ನು ಕುಡಿದ ಕೂಡಲೇ ತಾಪಮಾಪಕ ಯಂತ್ರ ಉಪಯೋಗಿಸಿದರೆ ಅದು ಹೆಚ್ಚಿಗೆ ಉಷ್ಣ ತೋರಿಸಬಹುದು. ಅದೇ ರೀತಿ ತಂಪಾದ ಪಾನಿಯ ಸೇವಿಸಿ ಇಲ್ಲವೆ ಬಾಯನ್ನು ತಣ್ಣೀರಿನಿಂದ ಮುಕ್ಕಳಿಸಿ ಕೂಡಲೇ ತಾಪಮಾಪಕ ಯಂತ್ರ ಉಪಯೋಗಿಸಿದರೆ ಉಷ್ಣದಲ್ಲಿ ಇಳಿತವು ಕಂಡು ಬರಬಹುದು. ಹೆಚ್ಚು ಹೊತ್ತು ಮೂತನಾಡದೆ ಲೂಬಾಯಿಯು ಉಷ್ಣ ಏರುತ್ತದೆ. ಈ ಕಾರಣಗಳಿಂದಾಗಿ ತಾಪಮಾಪಕ ಯಂತ್ರವನ್ನು ಉಪಯೋಗಿಸುವಾಗ ಬಹಳ ಜಾಗ್ರತೆ ವಹಿಸುವುದವಶ್ಯ. ಬಾಯಿಯ ಮೂಲಕ ಉಷ್ಣವನ್ನು ಅಳೆಯುವುದಿದ್ದರೆ ಒಬ್ಬನು ನಿದ್ದೆಯಿಂದ ಎಚ್ಚರವಾಗಿ ೫ ನಿಮಿಷಗಳನಂತರ ಇನ್ನೂ ಹಾಸಿಗೆಯಲ್ಲಿದ್ದಾಗಲೇ ಅಳೆಯುವುದು ಒಳ್ಳೆಯದು. ಈ ರೀತಿ ಐದು ನಿಮಿಷ ಹೊತ್ತು ಕಾಯುವುದಕ್ಕೆ ಕಾರಣವಿದೆ. ಬಾಯಿಯಿಂದ ಶ್ವಾಸ ಎಳೆಯುವವರಲ್ಲಿ ಬಾಯಿಯು ಉಷ್ಣದಲ್ಲಿ ಏರುಪಾಟು ಕಂಡುಬರಬಹುದು. ರಾತ್ರಿ ಹೊತ್ತಿಲ್ಲಾ ಬಾಯಿ ಮೂಲಕವನ್ನೇ ಗಾಳಿ ಸೇವಿಸಬೇಕಿದ್ದುದರಿಂದ ಬಾಯಿಯ ಉಷ್ಣ ಸಹಜ (ನಾರ್ಮಲ್) ಉಷ್ಣಕ್ಕಿಂತ ಕಡಿಮೆ ಕಂಡುಬರಬಹುದು. ಬಾಯಿಯನ್ನು ಮುಚ್ಚಿ ೫ ನಿಮಿಷಗಳ ವರೆಗೆ ಶ್ವಾಸೋಚ್ಛ್ವಾಸಗಳು ಕಳೆದ ನಂತರವೆ ಉಷ್ಣವು ಸಹಜಾವಸ್ಥೆಗೆ ಬರುವುದು. ಆಗಾಗ ಹಾರವನ್ನು ಸೇವಿಸುವುದಕ್ಕೆ ಮುಂಚಿತವಾಗಿಯೇ ಉಷ್ಣವನ್ನು ಅಳೆದು ಆ ಅಳತೆಯನ್ನು (ರೀಡಿಂಗ್) ಚದರಿಡಬೇಕು. ಆದರೆ ಬಾಯಿಯು ಮೂಲಕ ಉಷ್ಣ ಅಳೆಯುವಾಗ ತಾಪಮಾಪಕ ಯಂತ್ರದ ಅಡಿಭಾಗ ನಾಲಿಗೆಯ ಅಡಿಯಲ್ಲಿ ಭದ್ರವಾಗಿದ್ದು ಬಾಯಿಯನ್ನು ಮುಚ್ಚಿಡುವುದು ಅತ್ಯವಶ್ಯ.

ದೇಹದ ಉಷ್ಣದಲ್ಲಿ ಏರುವಿಕೆ ದೀರ್ಘ ಸಮಯದ ವರೆಗೆ ಕಂಡುಬಂದರೆ ಮೊತ್ತ ಅದನ್ನು 'ಜ್ವರ' ವೆನ್ನಬಹುದು. ಬೇಸಿಗೆ ಕಾಲದಲ್ಲಿ ಇಲ್ಲವೆ ಕದಗಳನ್ನು ಮುಚ್ಚಿದ ಕೋಣೆಯಲ್ಲಿ ಹೆಚ್ಚು ಸಮಯ ಕುಳಿತಿದ್ದು ಹೊರಗೆ ಗಾಳಿಗೆ ಮೈಯೊಡ್ಡಲು ವಿರಾಮ ದೊರೆಯದಿದ್ದಾಗ ಮೈಯು ಬೆಚ್ಚಗಾಗಬಹುದು. ಇದು ಜ್ವರವಲ್ಲ. ಇದೇ ರೀತಿ ಮನಸ್ಸು ಉದ್ರೇಕಗೊಂಡಾಗ ದೇಹದ ಉಷ್ಣವು ಅಲ್ಪಾವಧಿಯ ಮಟ್ಟಿಗೆ ಏರುವ ಸಂಭವವಿದೆ.

ಸಹಜ ಉಷ್ಣಕ್ಕಿಂತಲೂ ಉಷ್ಣವು ಏರಿದೆ ಎಂದು ತಿಳಿಯಬೇಕಾದರೆ ದೇಹದ ಸಹಜ ಉಷ್ಣ ಎಷ್ಟು ಎಂದು ತಿಳಿಯುವುದು ಅವಶ್ಯ. ೯೮.೪ F ಇದನ್ನು ಸಾಮಾನ್ಯವಾಗಿ ಸಹಜ ಉಷ್ಣ (ನಾರ್ಮಲ್ ಟೆಂಪರೇಚರ್) ಎಂದು ತಿಳಿದು ಕೊಳ್ಳುತ್ತಾರೆ. ಹೆಚ್ಚಿನ ತಾಪಮಾಪಕ ಯಂತ್ರಗಳಲ್ಲಿ ಈ ಅಂಕೆಯೇ ಎದುರುಗಡೆಯಲ್ಲೇ ಸಹಜ(ನಾರ್ಮಲ್) ಗುರುತು ಇರುತ್ತದೆ. ಹೀಗೆ ೯೮.೪ F ಇರುವಲ್ಲಿ ಸಹಜ ಉಷ್ಣದ ಸ್ವರೂಪ ಇರುವ ವಿಷಯವು ಶೋಚನೀಯವೆನ್ನಬೇಕಾಗಿದೆ. ಕಾರಣ ಕೆಲವರಲ್ಲಿ ಈ ಗುರುತು ತಪ್ಪಾಭಿಪ್ರಾಯಗಳನ್ನು ಕಲ್ಪಿಸಿದುದಿದೆ ಈ ಗುರುತಿನಿಂದ ಒಂದೆರಡು ಪೈಂಟ್ ಗಳಷ್ಟು ಹೆಚ್ಚಿಗೆ ಉಷ್ಣವಿದ್ದರೆ ಅದು ಜ್ವರವೆಂದು ಶಂಕಿಸುವವರೂ ಎಷ್ಟೋ ಮಂದಿ ಇದ್ದಾರೆ.

'ನೋರ್ಮಲ್' ಯೆನೆ ಸಹಜ ಉಷ್ಣದಿಂದ ಹೆಚ್ಚಿಗೆ ಉಷ್ಣತೋರಿಸಿದೆಲ್ಲಾ ಜ್ವರವೇ ಕಾರಣವಾಗಿರಬೇಕಾಗಿಲ್ಲ ಈ ೯೮.೪ F ವಾದಾಸ್ಪದವೇ; ಅದು ಹಲವು ಸಹಜ ಉಷ್ಣಗಳ ಒಂದು ಸರಾಸರಿ ಅಷ್ಟೆ. ಆರೋಗ್ಯವಂತನಾದ ವ್ಯಕ್ತಿಯಲ್ಲಿ ನಿಜಕ್ಕೂ ದೈನಂದಿನ ಉಷ್ಣವು ದಿನದ ಬೇರೆ ಬೇರೆ ಹೊತ್ತುಗಳಲ್ಲಿ ಬದಲಾಗುತ್ತದೆ. ಬೆಳಿಗ್ಗೆ ಚೆನ್ನಾದ ನಿದ್ರೆಯ ಬಳಿಕ ಅದು ೯೭.೬ರಿಂದ ೯೮.೦F ವರೆಗೆ ಇರಬಹುದು. ಮೆಲ್ಲಗೆ ಅದು ಎಂದಾ ವಧ್ಯಹ್ನ ೩ ಗಂಟೆಯ ಹೊತ್ತಿಗೆ ಜ್ಯೇಷ್ಠ ಮಿತಿಗೆ ಏರ್ಪಟ್ಟಬಹುದು. ಆಗ ೯೮.೮ರಿಂದ ೯೯.೦F ವರೆಗೆ ಇರಬಹುದು. ಆ ಮೇಲೆ ಅದು ಇಳಿಯತೊಡಗಿ ರಾತ್ರಿ ೮-೧೦ಗಂಟೆಯ ಹೊತ್ತಿಗೆ ೯೭.೬-೯೭.೮F ವರೆಗೆ ಇ

ದ್ದು ಮಜ್ಜಾನೆ ೨ ಗಂಟೆಯ ಹೊತ್ತಿಗೆ ಕನಿಷ್ಟ ಮಿತಿಗೆ ಎಂದರೆ ೯೭.೨ ರಿಂದ ೯೭.೪F ವರೆಗೆ ಮಟ್ಟಬಹುದು. ಹೀಗೆ ಉಷ್ಣವು ಸಹಜ ಉಷ್ಣವೆಂದು ಕರೆಯಲ್ಪಡುವ ೯೮.೪F ಗುರುತಿನಲ್ಲಾಗಲೀ ಬೇರಾವ ಗುರುತಿನಲ್ಲಾಗಲೀ ಏಕಪ್ರಕಾರ ಇರುವುದಿಲ್ಲವೆಂದಾಯಿತು. ೨೪ ತಾಸುಗಳಲ್ಲಿ ಅದು ಬದಲಾವಣೆ ಹೊಂದುತ್ತಿರುವ ಅಂತರ ಸುಮಾರು ೧೬ ರಿಂದ ೧.೪ ಡಿಗ್ರಿಗಳಷ್ಟಿರುವುದು. ಬೇಸಗೆಯಲ್ಲಿ ಉಷ್ಣವು ಸಾಮಾನ್ಯ ವ್ಯಕ್ತಿಯಲ್ಲಿ ಸುಮಾರು ೩.೨ ಡಿಗ್ರಿಯಷ್ಟು ಹೆಚ್ಚಿಗೆ ಏರಬಹುದು.

ಸಹಜ ಆರೋಗ್ಯ ಉಳ್ಳ ಸ್ತ್ರೀಯರಲ್ಲಿ ಮುಟ್ಟಿನ ನಿಂದಾಗಿಯೂ (ಮೆನ್ಸಸ್) ದೇಹದ ಉಷ್ಣತೆಯ ಮೇಲೆ ಬದಲಾವಣೆಗಳು ಕಂಡುಬರುತ್ತವೆ. ಮುಟ್ಟಿನ ಕಾಲದಲ್ಲಿ ಅದು ೦.೬ ರಿಂದ ೧೦ ಡಿಗ್ರಿಯ ವರೆಗೆ ಸಾಮಾನ್ಯವಾಗಿ ಏರುತ್ತದೆ. ಆದರೆ ಕ್ಷಯರೋಗದ ಸೋಂಕುಳ್ಳ ಸ್ತ್ರೀಯರಲ್ಲಿ ಉಷ್ಣತೆಯಲ್ಲಿ ಈ ಹೆಚ್ಚಳ ಮುಟ್ಟು ಸಂಭವಿಸುವ ೩-೪ ದಿವಸಗಳ ಮುಂಚೆ ಮುಟ್ಟಿನ ಕಾಲದಲ್ಲಿ ಇಲ್ಲವೆ ನಂತರ ಕಂಡು ಬರಬಹುದು.

'ಪ್ರ'

ಶ್ರೀ ಕೃಷ್ಣಮೂರ್ತಾರಿಯವರ ವಾದ ಸರಿಯಲ್ಲ.

ದಿ. ಮಂಶ್ರುವಾಲರ ಲೇಖನ.

ಕೈಮಗ್ಗಗಳಿಗೆ ಧೋತರ ಸೀರೆಗಳ ತಯಾರಿಕೆಯನ್ನು ಕಾಯ್ದಿರಿಸಬೇಕೆಂಬ ಶ್ರೀ. ರಾಜಾಜಿಯವರ ಸೂಚನೆಯನ್ನು ಕೇಂದ್ರದ ವಾಣಿಜ್ಯ ಮಂತ್ರಿ ಶ್ರೀ. ಕೃಷ್ಣಮೂರ್ತಾರಿಯವರು ನಿರಾಕರಿಸಿರುವದು ಕೇವಲ ಕಪಟವಾದವೆಂದು. ದಿ ಮಂಶ್ರುವಾಲರು ಮರಣಕ್ಕೆ ಮುಂಚೆ 'ಹರಿಜನ' ಪತ್ರಿಕೆಯ ಲೇಖನದಲ್ಲಿ ಕಾಣಿಸಿದ್ದಾರೆ.

ಮತ್ತು ಬಂಡವಲ ಶಾಹಿಗಳ ಹಾಗೂ ಸಾರಣಿ ಒಡೆಯರ ಸಂಯುಕ್ತ ವಿರೋಧವನ್ನು ಎದುರಿಸಲು ಸರಕಾರವು ಅಂಜುತ್ತಿದೆಯೆಂದವರು ಅಭಿಪ್ರಾಯಪಟ್ಟಿದ್ದಾರೆ.

ನಿರುದ್ಯೋಗಿಗಳ ದೃಷ್ಟಿಯಿಂದ ಕೈಮಗ್ಗದ ಉದ್ಯಮವು ಮಹತ್ವದ್ದೆಂದೂ, ಅನುಕೂಲ ಪರಿಸ್ಥಿತಿಯಿಲ್ಲವೆಂದು ನೇಕಾರರ ಕಲೆಯನ್ನು ಸಡಿಲಿಡಿಯಬಾರದೆಂದೂ ಶ್ರೀ. ರಾಜಾಜಿಯವರು ಸೂಚನೆಯನ್ನು ಸ್ವೀಕರಿಸಿದರೆ ಧೋತರ ಸೀರೆಗಳ ಕೊರತೆಯು ತಪ್ಪುವದೆಂದೂ, ಈ ಸಮಯದಲ್ಲಿ ಸಾರಣಿ ಒಡೆಯರಾದರೂ ಕಾಲಗತಿಯನ್ನು ಪುನರಾವಲೋಕಿಸಬೇಕೆಂದೂ ಶ್ರೀ ಮಂಶ್ರು ವಾಲರು ಅಭಿಪ್ರಾಯಪಟ್ಟಿದ್ದಾರೆ.

ಬೊಕ್ಸಿಂಗ್ ಸ್ಪರ್ಧೆಯಲ್ಲಿ ಲೋಕಬಿರುದು.

ಜೋಹಾನ್ಸ್ ಬರ್ಗಿನ ಫ್ಲೈವೈಟ್ ಚಾಂಪಿಯನನು ಜೇಕ್ ಟ್ಯೂಲಿ ಎಂಬ ೨೧ ವರ್ಷ ಪ್ರಾಯದ ಮುಷ್ಟಿಯುದ್ಧ ವಿಶಾರದನು ಬ್ರಿಟೀಷ್ ಮತ್ತು ರಾಷ್ಟ್ರೀಯ ಚಾಂಪಿಯನ್ ವಿ|ಟಿಡ್ಡಿಗಾರ್ಡ್ನರ್‌ನನ್ನು ಸೋಲಿಸಿ ಲೋಕದ ಚಾಂಪಿಯನ್ ಎಂಬ ಬಿರುದಿಗೆ ಆರ್ಹನಾದನು. ಆ ಪಂದ್ಯವು ಹದಿನೈದನೆಯ ರೌಂಡಿನಲ್ಲಿ ಸ್ಪರ್ಧೆಯಲ್ಲಿ ನಿಲ್ಲಿಸಲಾಯಿತು ಸ್ಪರ್ಧೆಯು ಹಿಂದಿನ ದಿನದ ವರೆಗೆ ಟೂಲಿಯು ಹೆಸರು ಇಂಗ್ಲಾಂಡಿನಲ್ಲಿ ಯಾರಿಗೂ ತಿಳಿದಿರಲಿಲ್ಲ. ಮಾರುದಿನವೇ ಲೋಕದ ಚೆಂಪಿಯನ್ ಪ್ರತಿಷ್ಠೆಗೆ ಪಾತ್ರನಾದ.

ಭಿಕ್ಷುಕನು ಹೊರೆಯೊಗ ಬಾರದು.

ಮಧುರೆಯ ನಗರ ಸಭೆಯು ಕಡೆಯಿಂದ ಕಟ್ಟಿಸಲ್ಪಟ್ಟ ನೂತನ ಭಿಕ್ಷುಕ ವಸತಿಯ ಉದ್ಘಾಟನೆ ನಡೆಸುತ್ತಾ ಮೂನ್ಯ ಮದ್ರಾಸು ಗವರ್ನರರು "ಭಿಕ್ಷೆ ಬೇಡುವುದು ಆತ್ಮ ಗೌರವಕ್ಕೆ ವಿರೋಧವಾದುದು. ಸ್ವತಂತ್ರ ಪ್ರಜಾಪ್ರಭುತ್ವವಾದಿ ಸಮಾಜದಲ್ಲಿ ಪ್ರತಿಯೊಬ್ಬ ವ್ಯಕ್ತಿ ತನ್ನ ಗೌರವವನ್ನು ರಕ್ಷಿಸಿಕೊಳ್ಳುವಂತೆ ನೋಡುವುದು ನಮ್ಮೆಲ್ಲರ ಹೊಣೆಯಾಗಿದೆ. ಭಿಕ್ಷೆ ಬೇಡುವವರು ಸೋಮಾರಿಗಳಾಗಿ ಜೀವಿಸಿ ಸಮಾಜಕ್ಕೆ ಹೊರೆಯಾಗ ಬಾರದು. ಅವರನ್ನು ಯೋಗ್ಯವಾದ ಕಲೆಗಳಿಗೊ ಗುಡಿ ಕೈಗಾರಿಕೆಗಳಿಗೊ ಹಚ್ಚುವುದು ತಕ್ಕ ಸಮಾಜ ರಚನೆಯಲ್ಲಿ ಅವರದೂ ಪಾತ್ರ ಕೊಡುವಂತೆ ಮಾಡುವುದೇ ಇಂತಹ ವಸತಿಗಳ ಉದ್ದೇಶವಾಗಿದೆ. ಈ ವಸತಿಗಳು ಕೇವಲ ವೈಗಳ್ಳರ ಆಶ್ರಯವಾಗಿರಬಾರದು. ಈ ಕಡೆ ಕೈಸ್ತ ಮಿಶನರಿಗಳು ಹಾಕಿ ಕೊಟ್ಟ ತಕ್ಕೆ ಅನುಸರಣೆಯಾಗಿದೆ." ಎಂದರು.

ಕೊಯಮುತ್ತೂರು ನಗರ ಸಭಾ ಚುನಾವಣೆ

ಕೊಯಮುತ್ತೂರಿನ ನಗರ ಸಭೆಯ ೩೬ ಸದಸ್ಯತನಗಳ ಪೈಕಿ ಒಂದು ಎಂಗ್ಲೊ ಇಂಡಿಯನ್ ಕಾದಿಡಲಾದ ಸ್ಥಾನಸಹಿತ ಐದು ಸ್ಥಾನಗಳು ಕಾಂಗ್ರೆಸ್ ಪಕ್ಷದವರಿಗೆ ಅವಿರೋಧವಾಗಿ ದೊರೆತಿವೆ ಆದರೆ ಎಂಗ್ಲೋ ಇಂಡಿಯನ್ ಸ್ಥಾನ ಕಾದಿರಿಸುವುದು ತಪ್ಪೆಂದು ಹೈಕೋರ್ಟು ಆಜ್ಞೆ ವಿಧಿಸಿದೆ. ಆದುದರಿಂದ ಆ ವಾರ್ಡಿನ ಎರಡೂ ಚುನಾವಣೆಗಳನ್ನು ಮುಂದರಿಸಲಾಗಿದೆ.

ಉತ್ತರ ಪ್ರದೇಶದಲ್ಲಿ ಭೀಕರ ಕ್ಷಾಮ

ಇತ್ತೀಚೆಗೆ ಉತ್ತರ ಪ್ರದೇಶದ ಬರಗಾಲ ಪೀಡಿತ ಪ್ರದೇಶಗಳನ್ನು ಸಂದರ್ಶಿಸಿ, ಅಲ್ಲಿಯ ಸ್ಥಿತಿಗತಿಗಳನ್ನು ಪ್ರತ್ಯಕ್ಷ ಕಂಡು ಬಂದ ಶ್ರೀ ಜೆ ಸಿ. ಕುಮಾರಪ್ಪನವರು ಜನರೆಲ್ಲರೂ ಅಸ್ಥಿ ಪಂಜರಗಳಂತೆ ಬಹಳ ಕಂಗಾಲು ಸ್ಥಿತಿಯಲ್ಲಿದ್ದಾರೆ ಅಲ್ಲಿಯ ವಸತಿಗಳನ್ನು ಸಂದರ್ಶಿಸಿದಾಗ ಸ್ತ್ರೀಯರು ಕಣ್ಣೀರಿನಿಂದ ನನ್ನನ್ನು ಸ್ವಾಗತಿಸಿದರು. ಸಹಕಾರದ ಪರಿಹಾರ ಕಾರ್ಯ ಏನೂ ಸಾಲದು. ಸಾಮಾಜಿಕ ಭಾವನೆಯೇ ಜನರಲ್ಲಿ ಲೋಪವಾದಂತಹ ಭೀಕರ ಪರಿಸ್ಥಿತಿ ಅಲ್ಲಿ ಎದ್ದು ತೋರುತ್ತಿದೆ' ಎಂದಿರುವರು.

ಆಚಾರ್ಯ ವಿನೋಬಾ ಭಾವೆ.

ಮಳೆಗಾಲದ ೭೦ ದಿವಸಗಳ ವರೆಗೆ ಬನಾರಸದಲ್ಲಿಯೇ ಉಳಿದಿದ್ದ ಆಚಾರ್ಯ ವಿನೋಬಾ ಭಾವೆಯವರು ತಮ್ಮ ಭೂದಾನ ಯಜ್ಞದ ಪ್ರವಾಸವನ್ನು ಪುನಃ ಪ್ರಾರಂಭಿಸಿದರು. ಉತ್ತರ ಪ್ರದೇಶದ ೧೭ ತಿಂಗಳ ಪ್ರವಾಸ ಮುಗಿಸಿ ಸೆಪ್ಟಂಬರ್ ೧೪ರಂದು ಬಿಹಾರಕ್ಕೆ ತೆರಳುವರು. ಉತ್ತರ ಪ್ರದೇಶದಲ್ಲಿ ೩॥ ಲಕ್ಷ ಎಕರೆ ಭೂಮಿಯನ್ನು ದೊರಕಿಸಿದ್ದು ರಾಷ್ಟ್ರದ ಮಹಾಕಾರ್ಯದ ಪ್ರಾರಂಭ ಸೂಚಕವಾದುದೆಂದು ಅವರು ತಮ್ಮ ನಿರ್ಗಮನದ ಪೂರ್ವದಲ್ಲಿ ಕೊಟ್ಟ ಸಂದೇಶದಲ್ಲಿ ಹೇಳಿದ್ದಾರೆ.

---

೪ ಸ್ಥಳಗಳಿಗೆ ೧೩೦೦ ಅರ್ಜಿ

ನಿರುದ್ಯೋಗದ ಭೀಕರ ಸ್ವರೂಪ

ಅಹ್ಮದಾಬಾದಿನ ಕಾರ್ಪೋರೇಶನ್ನಿನಲ್ಲಿಯ ನಾಲ್ಕು ಕಾರಕೂನಿಕೆ ಜಾಗೆಗಳಿಗೆ ನಾಲ್ಕನೂರು ಪದವೀಧರರನ್ನೊಳಗೊಂಡು ಸುಮಾರು ಸಾವಿರದ ಇನ್ನೂರು ಜನರು ಅರ್ಜಿ ಹಾಕಿದ್ದರೆಂದು ತಿಳಿದಿದೆ.

ಅದೇ ಕಾರ್ಪೋರೇಶನ್ನಿನಲ್ಲಿಯ ೧೭ ಕಾರಕೂನಿಕೆ ಜಾಗೆಗಳಿಗೆ ಈ ಮೊದಲು ಸುಮಾರು ಸಾವಿರದ ಐನೂರು ಜನರು ಅರ್ಜಿ ಹಾಕಿಕೊಂಡಿದ್ದರು.

ಕೊಡಗು ಪ್ರಾಂತೀಕ ಸಹಕಾರಿ ಮಾರ್ಕೆಟಿಂಗ್ ಫೆಡರೇಶನ್ ಲಿಮಿಟೆಡ್.,

ಹೆಡ್ ಆಫೀಸು :—ವೀರಾಜಪೇಟೆ.

ಶಾಖೆ:—ನ್ಯೂ ಜ್ಯುಬಿಲಿ ಬಿಲ್ಡಿಂಗ್ಸ್, ಮಡಿಕೇರಿ.

ನಮ್ಮಲ್ಲಿ ಈ ಕೆಳಗೆ ತೋರಿಸಿರುವ ಸಾಮಾನುಗಳು ದೊರೆಯುತ್ತವೆ.

1. 32 ರಿವಾಲ್ವರುಗಳು ಮತ್ತು ಪಿಸ್ತೂಲುಗಳು.
2. 12ನೇ ನಂಬರಿನ ಒಂಟೆ ಮತ್ತು ಜೋಡು ಹೊಳವಿನ ಕೋವಿಗಳು.
3. 12, 16 ಮತ್ತು 20ನೇ ನಂಬರಿನ ತೋಟಗಳ, ಕೋವಿ ಮದ್ದು ಮತ್ತು ಕೇಪುಗಳು.
4. 9″ × 4″ ಮತ್ತು 8″ × 4″ ಕಬ್ಬಿಣದ ತೊಲೆಗಳು (Girders)
5. 8′ × 3′ × 24 (Gage) ಕಬ್ಬಿಣದ ತಗಡುಗಳು.
6. $1\frac{3}{4}$″ × $\frac{5}{16}$″ ಉಕ್ಕಿನ ಪಟ್ಟಿಗಳು (Spring steel flates)
7. ಕಾಫಿ ಮತ್ತು ಕಿತ್ತಳೆ ಗಿಡಗಳಿಗೆ ಸ್ಪ್ರೈ ಮಾಡುವ ಪಂಪುಗಳು.
8. ವ್ಯವಸಾಯದ ಎಲ್ಲಾ ತರದ ಹತ್ಯಾರುಗಳು.

ಹೆಚ್ಚಿನ ಮಾಹಿತಿಯನ್ನು ಆಫೀಸಿನಿಂದ ತಿಳಿದುಕೊಳ್ಳಬಹುದು.

(ಅವಶ್ಯವಿರುವ ಕೋವಿಗಳಿಗೂ, ತೋಟಗಳಿಗೂ, ಜಿಲ್ಲಾ ಮೇಜಿಸ್ಟ್ರೇಟರಿಂದ ವಿಶೇಷ ಪರ್ಮಿಟ್ಟು 'Special purchase permit' ಪಡೆಯಬೇಕಾಗಿದೆ.

ಎಂ. ಎಸ್. ಸೋಮಯ್ಯ, (ಗೌ. ಕಾರ್ಯದರ್ಶಿ)

ಪಿ. ಐ. ಬೆಳ್ಯಪ್ಪ, (ಪ್ರೆಸಿಡೆಂಟ್.)

ಕೊಡಗು ಪ್ರಾಂತೀಕ ಸಹಕಾರಿ ಬ್ಯಾಂಕ್, ಲಿಮಿಟೆಡ್, ಮಡಿಕೇರಿ.

ಕೋ.ಆಪರೇಟಿವ್ ಸೊಸೈಟೀಸ್ ಆಕ್ಟ್ ಪ್ರಕಾರ ರಿಜಿಸ್ಟರಾಗಿದೆ. (1921ರಲ್ಲಿ ಸ್ಥಾಪಿತವಾಗಿದೆ.

ಅಧಿಕೃತ ಶೇರು ಭಂಡವಾಳ	ರೂ.	10,00,000
ವಸೂಲಾದ ಶೇರು ಮೊಬಲಗು	ರೂ.	2,09,000
ಕ್ಷೇಮನಿಧಿ	ರೂ.	63,000
ಇತರ ನಿಧಿಗಳು	ರೂ.	17,000
ಠೇವಣಾತಿ	ರೂ.	8,86,000

ಬ್ಯಾಂಕಿನ ಎಲ್ಲಾ ವಿಧದ ವ್ಯವಹಾರಗಳನ್ನೂ ಕೈಕೊಳ್ಳಲಾಗುವುದು.

ಈ ಬ್ಯಾಂಕಿನಿಂದ ಹೆಚ್ಚಾಗಿ ಸಹಕಾರ ಸಂಘಗಳಿಗೇನೇ ಸಾಲ ಕೊಡುವುದಲ್ಲದೆ ಚಿನ್ನ ಮತ್ತು ಚಿನ್ನದ ನಗಗಳ ಈಡಿನ ಮೇಲೆ ಸಹ ಸಾಲ ಕೊಡಲಾಗುವುದು. ಜೆಕ್ ಯೂ ಡ್ರಾಫ್ಟ್‌ಗಳ ಡಿಸ್ಕೌಂಟು ಮಾಡಲ್ಪಡುವುದು. ಟ್ರೆನಿಟಿ, ವಾರ್ಡನ್ ಮತ್ತು ವಿಶ್ವಭಾರತಿ ಇನ್ಶೂರೆನ್ಸ್ ಕಂಪೆನಿಗಳ ಪ್ರೀಮಿಯಂ ಹಣವನ್ನು ಹೊಂದಿಕೊಳ್ಳಲಾಗುವುದು. ಹೆಚ್ಚಿನ ಮಾಹಿತಿಯನ್ನು ಆಫೀಸಿನಿಂದ ತಿಳಿದುಕೊಳ್ಳಬಹುದು.

ಎಂ. ಎಸ್. ಸೋಮಯ್ಯ, ಜಂ. ಕಾರ್ಯದರ್ಶಿ,

ಕೆ. ಪಿ. ಅಪ್ಪಯ್ಯ, ಪ್ರೆಸಿಡೆಂಟ್ ಮತ್ತು ಮ್ಯಾನೇಜ್.

Edited, Printed and Published by P. I. Belliappa at 'Kodagu' Press, Mercara, for Kodagu' Ltd.